† Sri Y. Veerappa (Holenarasipur).- Sir, I submit that this measure is not a healthy measure to introduce at this juncture which directly affects the agriculturist class. The Hon'ble Minister explained that this Bill is not meant to take the flesh. I submit, that this is meant not only to take the flesh but also the blood of the raiyats. When they are increasing the land revenue and when the raiyats are to pay the agricultural income-tax and several cther taxes, this would mean another extra burden. Another thing is, that though this Bill was passed in 1957 and the rules were published, the Government have slept over this matter for these four year and now they have come forward with this measure. This Bill c ntemplat s enhancement of betterment levy and water rate. It is said that the beneficiaries wou'd be willing to pay a higher contribution. J st because some agriculturists are willing to pay, it does not stand to re son to bring this Bill. I submit that all the raiyats who are said to get some water as a result of an irrigational project, are not willing to pay this enhanced levy. This is not the only reason to be taken into consideration. As my friend has already pointed out, other vital aspect should be taken into consideration. The fertility of the land, the marketing facilities that are available, all these should be taken into consideration. Otherwise, there is no justification on the part of the Government to bring this enactment.

The other peculiar aspect that is seen conspicuously in this Bill is, the enhancement of water rates. I do not know what prompted the Government to enhance the wet assessment land. They have already assessed the land and there is no reason why they should think of this extra measure. The water supply got indirectly as a result of perculation or drainage from the adjacent land is also going to be taken into consideration the levy is going to be enhanced. There is no justification for this. In the objects and reasons, it is stated that some of the raiyats are willing to pay. It cannot be taken for granted that all the people are willing to pay this enhanced rate. Such of those whose lands are in the tail end, to get some more income, might have agreed to pay. Therefore, Government is not justified in saying that some people are willing to pay voluntarily and therefore they want to bring forth this measure.

Particularly, as my friend pointed out already when the peasants have not sought for the levy of water rate and betterment levy on the land which come under irrigation project, I do not know what promoted this Hon'ble Government to think of this measure just to harrass the ryots. They have been unable to properly implement the act already passed by this House, even after a lapse of four years and now they have come forward with this measure to enhance the levy. This only shows that the Government is not interested in the people or the agriculturists, who are the back one of the country. At every concievable stage they say that the agriculturists are the most essential class of people but I submit that the agriculturists are the most neglected and down-trodden lot. As this bill directly affects the agricultural class, I submit that this is not a healthy measure to be brought at this juncture, when they are already over-burdened with so many other taxes like the agricultural income tax the proposed enhancement of land revenue etc. In these circumstances, I oppose this measure. The Government has not been diligent or wise in bringing this measure. They have advanced trivial reasons in support of this measure. Whenever such important measures affecting a large number of people are brought, Government should come forth with convincing and valid reasons. I would request them to enforce the measure already in force and thus increase income.

Another point is that the Government has not been pleased to state the estimated income as consequence of passing this enactment.

Sri C. M. ARUMUGHAM.—Sir, the Hon'ble Member said opposed the Bill. Now supposing, for arguments sake, Government states the income that would accrue to them, would the Hon'ble Member support the Bill?

Sri Y. VEERAPPA.—It is usual when a bill of this nature is brought for the approval of the House. Government must indicate the amount that they would recover if the bill is passed into law. In the absence of such indication the bill would be vague and cannot be justified.

(Sri Y. Veerappa)

In any case, as I said before, this measure is not healthy and ought to be discouraged. Government must reconsider and take back the bill. Even the planners have not contemplated such a measure. Therefore I oppose the Bill.

Mr. Speaker.—Sri Muckannappa to speak.

Sri C. M. Arumugham.—Several times, Mr. Speaker, you were kind enough to say that P.S.P. should speak with one voice on matters of policy. Now my friend is opposing the bill. I want to know whether that is the opinion of the P.S.P. also?

Sri Y. Veerappa.—This is not the forum for my friend to seek enlightenment on P.S.P. doctrines. *Prima facie* I consider my young friend's interjection as part of his mischevous tendency.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸ್ವಾಮಿ, ಹೆಚ್ಚು ಕೆರೆಗಳನ್ನು ಕಟ್ಟಬೇಕು, ಜನಗಳ ಉದ್ಧಾರ ಮಾಡಬೇಕೆಂಬ ಉದಾತ್ತವಾದ ಧ್ಯೇಯವನ್ನಿಟ್ಟುಕೊಂಡು ಈ ಮಸೂದೆಯನ್ನು ಸರ್ಕಾರದವರು ತಂದಿದ್ದೇವೆಂದು ಹೇಳುತ್ತಾರೆ. ರೈತರಿಗೋಸ್ಕರ ಹೋರಾಟ ಮಾಡಿದಂಥ ನಮ್ಮ ವೀರಣ್ಣಗೌಡರ ಕೈನಲ್ಲಿ ರೈತರಿಗೆ ಮತ್ತಷ್ಟು ಹಿಂಸೆ ಕೊಡತಕ್ಕಂಥ, ರೈತರನ್ನು ಮತ್ತಷ್ಟು ಕಷ್ಟಕ್ಕೊಳಪಡಿಸತಕ್ಕಂಥ ಈ ಮಸೂದೆಯನ್ನು ತರಿಸುವ ಹಾಗೆ ಏಕೆ ಮಾಡಿದರೋ ನನಗೆ ಗೊತ್ತಾಗುತ್ತಿಲ್ಲ. ಲೆವಿ ಆಫ್ ಬೆಟರ್‌ಮೆಂಟ್ ಕಂಟ್ರಿಬ್ಯೂಷನ್ ಆಕ್ಟ್ ಚರ್ಚೆಗೆ ಬಂದಾಗ ಅವರು ಭಾಷಣ ಮಾಡಿದರು. ಅವರು ರಾಜ್ಯದಲ್ಲಿ ಇಂಪ್ಲಿಮೆಂಟ್ ಆಗುವ ಕಾಲದಲ್ಲಿ ಅಧಿಕಾರ ತ್ಯಾಗ ಮಾಡಿದರು. ಮತ್ತೆ ಈ ಬೆಟರ್‌ಮೆಂಟ್ ಲೆವಿ ಜಾಸ್ತಿ ಮಾಡಿ ಅದರಿಂದ ಲಾಭ ಆಗುತ್ತದೋ ಇಲ್ಲವೊ ಎಂದು ಪರೀಕ್ಷಿಸುವುದರೊಳಗೆ ಅವರು ಪುನಃ ಅಧಿಕಾರದಲ್ಲಿರುತ್ತಾರೋ ಇಲ್ಲವೋ ಎಂಬ ಭಯ ಬಂದಿದೆ ಗವರ್ನರ್ ಅಸೆಂಟ್ ಮತ್ತು ಪ್ರೆಸಿಡೆಂಟ್ ಅಸೆಂಟ್ ಒಂದು ಆಕ್ಟು ಕಾರ್ಯಗತವಾಗುವಾಗ ಅಧಿಕಾರದಲ್ಲಿರುತ್ತಾರೋ ಇಲ್ಲವೊ. ಆದ್ದರಿಂದ ರೈತರು ನೊಂದುಕೊಳ್ಳುವಂಥ ಈ ಮಸೂದೆಯನ್ನು ಏಕೆ ತರಬೇಕು! ರೈತರಿಗೋಸ್ಕರ ಚಳುವಳಿ ನಡೆಸಿದ ವೀರಣ್ಣಗೌಡರು ಈ ತಿದ್ದುಪಡಿ ಮಸೂದೆಯನ್ನು ಏಕೆ ತರುತ್ತಿದ್ದಾರೊ ಎಂದು ನನಗೆ ಸ್ಪಷ್ಟವಾಗಿಲ್ಲ. It is found that in a number of ceses the beneficiries would be willing to pay even a higher contibution ಎಂಬ ಒಂದು ವಾಕ್ಯ ಹಾಕಿದ್ದಾರೆ. ಆದರೆ ಇದನ್ನು ಹೇಳುವಾಗ ದೇಶದಲ್ಲಿ ಇದರಿಂದ ಏನು ಅತೃಪ್ತಿ, ಅಸಮಾಧಾನವಾಗುತ್ತದೆನ್ನುವುದನ್ನು ಯೋಚನೆ ಮಾಡಿಲ್ಲ. ಈ ಬಿಲ್ಲನ್ನು ಡ್ರಾಫ್ಟ್ ಮಾಡಿದ್ದರೂ, ಶ್ರೀ ವೀರಣ್ಣಗೌಡರು ಮಂತ್ರಿಗಳಾಗಿರದಿದ್ದರೆ, ಇದನ್ನು ತಡೆಯಿರಿ ಎಂದು ಹೇಳುತ್ತಿದ್ದರು ಸರ್ಕಾರದಲ್ಲಿ ಯಾರೇ ಮಸೂದೆ ಮಾಡಿದ್ದರೂ, ಇತರ ಮಂತ್ರಿಗಳು ಸಪೋರ್ಟ್ ಮಾಡಬೇಕೆಂಬ ಒಂದು ಸಂಪ್ರದಾಯವಿದೆ. ಅದಕ್ಕನುಗುಣವಾಗಿ ನಮ್ಮ ಸ್ನೇಹಿತರಾದ ಶ್ರೀ ವೀರಣ್ಣಗೌಡರು ಈ ಕಾಯಿದೆಯನ್ನು ಕಾನೂನು ಕಡತಕ್ಕೆ ಏರಿಸಲು ಅರೆಬರೆ ಮನಸ್ಸಿನಿಂದ ಇದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೋಸ್ಕರ ನಾನು ಮಾನ್ಯ ಮಂತ್ರಿಗಳನ್ನು ವಿನಯದಿಂದ ಕೇಳಿಕೊಳ್ಳುತ್ತಿದ್ದೇನೆಂದರೆ ಈ ಜಮೀನಿನ ವಾಟರ್ ರೇಟ್ ಅಥವ ಕಂಟ್ರಿಬ್ಯೂಷನ್, ಬೆಟರ್‌ಮೆಂಟ್ ಲೆವಿ ಫಿಕ್ಸ್ ಮಾಡುವುದಕ್ಕೆ ಮುಂಚೆ, ಮೈಸೂರು ಸಂಸ್ಥಾನದಲ್ಲಿ ಏನೊಂದು ಭೂಸುಧಾರಣೆಯೆಂದು ಹೇಳುತಿದ್ದರೋ ಆ ಭೂಸುಧಾರಣೆಯನ್ನು ಜಾರಿಗೆ ತಂದ ಮೇಲೆ, ಈ ಮಸೂದೆಯನ್ನು ತೆಗೆದುಕೊಳ್ಳಬಹುದು. ಏಕೆಂದರೆ ನೀವು ಲ್ಯಾಂಡ್ ಮೇಲೆ ಸೀಲಿಂಗ್ ನಿಗದಿ ಮಾಡುವ ತೀರ್ಮಾನಕ್ಕೆ ಬಂದಿದ್ದೀರಿ. ಅವಾಗ 100 ಎಕರೆ ಭೂಮಿ ಇರುವವರಿಗೆ, 25 ಎಕರೆ ಇರಬಹುದು ಪರ್ಮನೆಂಟ್ ಸೋರ್ಸ್ ಆಫ್ ವಾಟರ್ ಸಪ್ಲೈ ಇದ

ಬಹುದು, ಮೆನಿಯಲ್ ಸೋರ್ಸ್ ಇಲ್ಲದಿರಬಹುದು. ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟ್ ನಮ್ಮ ಮುಂದಿರುತ್ತದೆ. ಆ ರಿಪೋರ್ಟಿನ ಸೀಕ್ರೆಸಿಯನ್ನು ಹೊರಗೆಡಹುತ್ತಿಲ್ಲ. ಇದನು ಸರ್ಕಾರದವರು ಸ್ವಲ್ಪ ಯೋಚನೆ ಮಾಡಬೇಕಾದ ವಿಷಯ. ಲ್ಯಾಂಡ್ ರೆವಿನ್ಯೂ ಬಿಲ್ಲನ್ನು ಈ ಸಭೆಯಲ್ಲಿ ತನ್ನಿ, ಏನು ಅಭಿಪ್ರಾಯ ಬರುತ್ತದೆ ನೋಡಿ, ಆ ಅಭಿಪ್ರಾಯದ ಮೇಲೆ, ಈ ಬಿಲ್ಲನ್ನು ವಿಚಾರ ಮಾಡಿ, ಬದಲಾವಣೆ ಮಾಡಿ ತೆಗೆದುಕೊಂಡು ಬಂದರೆ, ಅವಾಗ ಯಾವ ರೀತಿ ಸ್ವಾಗತ ದೊರೆಯುತ್ತದೆಯೋ ಗೊತ್ತಿಲ್ಲ. ಮೊಟ್ಟಮೊದಲು ಲ್ಯಾಂಡ್ ರೆವಿನ್ಯೂ ಬಿಲ್ ಪಾಸ್ ಮಾಡಿ. ಏಕೆಂದರೆ ಆ ಬಿಲ್ಲಿನಲ್ಲಿ ಭೂಮಿ ಡಿವೈಡ್ ಮಾಡಿಬಿಟ್ಟಿದ್ದಾರೆ. ಭೂಮಿ ಬೆಲೆ ಕಟ್ಟುವಾಗ, ಅದರಲ್ಲಿ ಆಗುವ ಫಸಲು ಎಷ್ಟು, ಮಳೆ ಎಷ್ಟು ಮುಂತಾದುವನ್ನು ನೋಡಿ, ಎಷ್ಟು ವಿಸ್ತೀರ್ಣದ ಭೂಮಿಯಲ್ಲಿ 3,600,1,200 ರೂಪಾಯಿ ಉತ್ಪನ್ನ ಬರುತ್ತದೆ,ಇದನ್ನೆಲ್ಲಾ ನೋಡಿ, ಸರ್ಕಾರ ಫಿಕ್ಸ್ ಮಾಡಬೇಕಾಗುತ್ತದೆ. ಈ ಎಲ್ಲ ಪ್ರಶ್ನೆಗಳನ್ನು ತೆಗೆದುಕೊಂಡು ಯೋಚನೆ ಮಾಡಿ ಸೀದ ನೇರವಾಗಿ ಈ ಬಿಲ್ಲನ್ನು ಪಾಸ್ ಮಾಡಿ. ಈಗ ಈ ಮಸೂದೆಯನ್ನು ತರುವುದು ಸರಿಯಲ್ಲವೆಂದು ನನಗೂ ಅನಿಸುತ್ತದೆ. ನನ್ನ ಸ್ನೇಹಿತರಾದ ವೀರಣ್ಣಗೌಡರೇ, ಅಪರ ಭೂಮಿಗೆ ಕೃಷ್ಣರಾಜಸಾಗರದ ನೀರು ನೇರವಾಗಿ ಬರುವುದಿಲ್ಲವೆಂದು ಹೇಳಿದ್ದಾರೆ. ಕೃಷ್ಣರಾಜಸಾಗರದ ಪಕ್ಕದಲ್ಲಿರತಕ್ಕ ಥಾವು ಮಂಡ್ಯ, ಮದ್ದೂರು, ಮಳವಳ್ಳಿ ಪ್ರಾಜೆಕ್ಟುಗಳು ಬೆಟರ್‌ಮೆಂಟ್ ಲೆವಿಯಿಂದ ಸ್ಥಳದಲ್ಲಿರತಕ್ಕಂಥವರಿಗೇ ಅನುಕೂಲವಾಗುವುದಿಲ್ಲ, ನೀರು ಬರುವುದಿಲ್ಲ. ಇಂತಹುದರಲ್ಲಿ ಬೆಟರ್‌ಮೆಂಟ್ ಲೆವಿ ರಿಕವರ್ ಮಾಡುವುದಕ್ಕೆ ಯೋಚನೆ ಮಾಡುತ್ತಿದ್ದೀರ. ಇದರಿಂದ ಎಷ್ಟು ದುಡ್ಡು ಸರ್ಕಾರಕ್ಕೆ ಬರುತ್ತೆ ಎಂಬುದನ್ನು ಹೇಳಿಲ್ಲ. ದೇಶದಲ್ಲಿ ಇಂತಿಂತ ದೊಡ್ಡ ದೊಡ್ಡ ಪ್ರಾಜೆಕ್ಟುಗಳನ್ನು ಕಟ್ಟಿಸಲಾಗುತ್ತೆ. ಆ ಬಗ್ಗೆ ಈ ಶಾಸನದಿಂದ ಇಷ್ಟು ಹಣ ಬರುತ್ತೆ ಎಂಬ ವಿಚಾರಗಳೊಂದನ್ನೂ ತಿಳಿಸದೆ ಏಕಾಏಕೀ ಈ ಮಸೂದೆಗೆ ನಿಮ್ಮ ಒಪ್ಪಿಗೆಯನ್ನು ಕೊಡಿ ಎಂತ ಕೇಳುವುದನ್ನು ನೋಡಿದರೆ ಇದು ಹೇಗಿದೆ ಎಂದರೆ ''ಮೂಗ ಇಟ್ಟ ಕಿವುಡ ಉಂಡ'' ಎಂದು ಹೇಳಿದಂತಿದೆ. ಆದ್ದರಿಂದ ನಾವು ಇದನ್ನು ಒಪ್ಪುವುದಕ್ಕಾಗುವುದಿಲ್ಲ.

4-30 P.M.

Sri S. D. KOTHAVALE.—The rules that the Government will frame will be laid on the Table of this House and the Hon'ble Member may suggest amendments. If the rules are to be amended I do not find any difficulty.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಅಧ್ಯಕ್ಷರ ಮೂಲಕ ನಾನೀಗ ಶ್ರೀ ಕೋಥಾವಳೆಯವರ ಗಮನಕ್ಕೆ ಒಂದು ಅಂಶ ತರಲಿಚ್ಛಿಸುತ್ತೇನೆ ಈ ಹಿಂದೆ ಸರ್ಕಾರದವರು ಡಾ. ನಾಗನಗೌಡ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ನೇಮಕ ಮಾಡಿದ್ದರು. ಆ ಕಮಿಟಿಯವರು 1954ನೇ ಇಸವಿ ಮೇ 11ನೇ ತಾರೀಖಿನಲ್ಲಿ ಒಂದು ರಿಪೋರ್ಟನ್ನು ಕೊಟ್ಟರು. ಆ ರಿಪೋರ್ಟಿನಲ್ಲಿ ಆ ಕಮಿಟಿಯವರು ವಾಟರ್ ರೇಟ್ ಮತ್ತು ಬೆಟರ್‌ಮೆಂಟ್ ಲೆವಿ ಈ ಎರಡನ್ನೂ 600 ರೂಪಾಯಿಗಳವರೆಗೂ ಹಾಕಬಹುದೆಂದು ಶಿಫಾರ್ಸು ಮಾಡಿದ್ದರು. ಆದರೆ ಆಗ ಸರ್ಕಾರದವರು ಇದು ಬಹಳ ಜಾಸ್ತಿ ಆಗುತ್ತೆಂದು ಹೇಳಿ ಅದನ್ನು 500 ರೂಪಾಯಿಗಳಿಗೆ ಇಳಿಸಿ-ಅದರ ಬಗ್ಗೆ ಈ ಸಭೆಯ ಒಪ್ಪಿಗೆ ಮುದ್ರೆಯನ್ನು ಪಡೆದರು. ಆಗಿದ್ದ ಪರಿಸ್ಥಿತಿಯಲ್ಲಿ ಈ ರೀತಿ 600 ರೂಪಾಯಿಗಳು ಬಹಳ ಜಾಸ್ತಿಯಾಗುತ್ತೆಂಬುದಾಗಿ ಒಪ್ಪಿದ್ದ ಸರ್ಕಾರ ಈ ದಿವಸ ಈ 500 ರೂಪಾಯಿಗಳಿದ್ದುದನ್ನು ಏಕಾಏಕಿ ವಜಾ ಮಾಡಿ ಈ ಛಾರ್ಜನ್ನು ಇನ್ನೂ ಜಾಸ್ತಿ ಮಾಡಬೇಕೆಂದು ಈಗ ಈ ರೀತಿ ಒಂದು ತಿದ್ದುಪಡಿಯನ್ನು ತರಲು ಸರ್ಕಾರದವರಿಗಿದ್ದ ಅಂಥ ಘನತರವಾದ ಕಾರಣಗಳೇನಿದ್ದುವು? ನನಗೆ ಕಾಣುತ್ತಿರುವಂತೆ ಹೀಗೆ ಒಂದಕ್ಕೆ ಎರಡರಷ್ಟನ್ನು ಜಾಸ್ತಿ ಮಾಡಬೇಕೆಂದು ಕೇಳಲು ಸರ್ಕಾರದವರಿಗೆ ಅಂಥ ಕಾರಣಗಳೊಂದೂ ಇಲ್ಲವೆಂದು ಹೇಳುತ್ತೇನೆ. ಈಗಾಗಲೇ

(ಶ್ರೀ ಜಿ. ಮಾಣಿಕ್ಯಪ್ಪ)

ನನ್ನ ಸ್ನೇಹಿತರಾದ ಶ್ರೀ ನರಸಿಂಹನ್‌ರವರು ಹೇಳಿದ ಹಾಗೆ ಈ ಮಸೂದೆಯಲ್ಲಿ ಎಲ್ಲಿಯೂ ಹೀಗೆ ಬೆಟರ್‌ಮೆಂಟ್ ಲೆವಿಯನ್ನು ಹೆಚ್ಚಿಸತಕ್ಕ ಬಗ್ಗೆ ಕಾರಣಗಳನ್ನು ಸೂಚಿಸಿಲ್ಲ. ಈ ಹಿಂದೆ ಆದರೂ ಸಹ ಸರ್ಕಾರದವರೇನು ಮಾಡಿದರು? ಕೇವಲ ಒಂದು ಬೇರ್ ಆಕ್ಟನ್ನು ಮಾತ್ರ ಈ ಸಭೆಯಿಂದ ಪಾಸ್ ಮಾಡಿಸಿಕೊಂಡರು. ಇದ್ದಿದ್ದು ನಾಲ್ಕು ವರ್ಷಗಳು ಕಳೆದ ನಂತರ ಈಗ ಅದಕ್ಕೆ ರೂಲ್ಸ್ ಮಾಡಿದ್ದಾರೆ. ಹಾಗೆ ರೂಲ್ಸನ್ನು ತಯಾರು ಮಾಡುತ್ತಿದ್ದರೆಯೇ ಇದರ ಜೊತೆಯಲ್ಲಿ ಒಂದು ತಿದ್ದುಪಡಿಯನ್ನೂ ತಂದಿದ್ದಾರೆ. ಆದರೆ ಆ ಕೈಗೆ ನಮ್ಮ ಅನುಮತಿ ಪಡೆದುಕೊಂಡನಂತರ ಸರ್ಕಾರದವರು ಫ್ರೇಂ ಮಾಡತಕ್ಕ ರೂಲ್ಸುಗಳಲ್ಲಿ ಏನಾದರೂ ತಿದ್ದುಪಡಿ ಮಾಡಬೇಕಾದ್ದರೆ ಸದಸ್ಯರಿಗೆ ಆ ಅವಕಾಶವಿದೆ. ರೂಲ್ಸುಗಳು ಈ ಸಭೆಯ ಮುಂದೆ ಸದಸ್ಯರ ಒಪ್ಪಿಗೆಗಾಗಿ ಬರುತ್ತವೆ ಎಂತ ಹೇಳಿದರು. ಆದರೆ ಇಲ್ಲಿಯವರೆಗೆ ಸರ್ಕಾರದವರು ಈ ಸಭೆಯಿಂದ ಅಂಗೀಕೃತವಾದ ಎಷ್ಟು ಮಸೂದೆಗಳ ಬಗ್ಗೆ-ಈ ರೂಲ್ಸನ್ನು ಸರ್ಕಾರದವರು ಫ್ರೇಂ ಮಾಡಿ—ಅವುಗಳನ್ನು ಸರ್ಕಾರದವರು ಈ ಸಭೆಯ ಮುಂದೆ ತಂದಿದ್ದಾಗ ಅಂಥ ಎಷ್ಟು ರೂಲ್ಸುಗಳಿಗೆ ಶ್ರೀ ವರ್ತ ಕೋಣಾರೆ ಅವರು ತಿದ್ದುಪಡಿಗಳನ್ನು ಸೂಚಿಸಿದರು—ಆ ಬಗ್ಗೆ ಎಷ್ಟು ಅಂಗೀಕೃತವಾದವು ಎಂಬುದನ್ನು ಅವರಿಗೆ ಹೇಳಲಿ—ನೋಡೋಣ! ನಾವು ಈ ರೂಲ್ಸುಗಳಿಗೇನಾದರು, ಒಂದು ಅಮೆಂಡ್‌ಮೆಂಟನ್ನು ಸೂಚಿಸೋಣ ಎಂದರೆ— ಆ ತಿದ್ದುಪಡಿಗಳು ಚರ್ಚೆಗೆ ಬರೋವೇಳೆಗೆ ಈ ಸಭೆ ಇರುತ್ತದೋ—ಇಲ್ಲವೋ ಅದೂ ಸಹ ಗೊತ್ತಾಗುವಂತಿಲ್ಲ. ಹೀಗಿರುವಾಗ ನಾವು ರೂಲ್ ಮೇಕಿಂಗ್ ಪವರನ್ನು ಸರ್ಕಾರದವರ ಕೈಗೆ ಕೊಟ್ಟಮೇಲೆ ಅವರು ಏನು ಬೇಕಾದರೂ ಮಾಡಬಹುದು. ಆ ಬಗ್ಗೆ ಟೀಕೆ ಮಾಡಲು ನಮಗೆ ಅವಕಾಶವೇ ಇಲ್ಲ. ಈಗ ಸರ್ಕಾರದವರು ಈ ವಾಟರ್ ರೇಟನ್ನು ಹೇಗೆ ಫಿಕ್ಸ್ ಮಾಡಬೇಕು, ಇದನ್ನು ಯಾವ ರೀತಿ ವಸೂಲ್ಮಾಡಬೇಕೆಂಬ ಬಗ್ಗೆ ಅವರು ಏನು ಹೇಳಿದ್ದಾರೆ? ಗ್ರೇಡೆಡ್ ವಾಟರ್ ರೇಟನ್ನು ಯಾವ ಯಾವ ಹಂತದಲ್ಲಿ ಹೇಗೆ ಹಾಕಬೇಕು ಎನ್ನುವುದನ್ನು ಕೂಡ ಇದರಲ್ಲಿ ತಿಳಿಸಿಲ್ಲ. ನಮ್ಮ ಮನಸ್ಸಿನಲ್ಲಿರತಕ್ಕ ಅನುಮಾನಗಳೇನಿವೆ, ಅವುಗಳೊಂದನ್ನೂ—ಈ ಬಿಲ್ಲು ಪರಿಹರಿಸುವಂತಿಲ್ಲ. ಮೊದಲನೇ ವರ್ಷ ಕಾಲು ಭಾಗ, ಎರಡನೇ ವರ್ಷ ಅರ್ಧ ಭಾಗ ಮೂರನೇ ವರ್ಷ ಮುಕ್ಕಾಲು ಭಾಗ ಮತ್ತು ನಾಲ್ಕನೇ ವರ್ಷ ಪೂರ್ತಿ ವಾಟರ್ ರೇಟನ್ನು ಕೊಡಬೇಕೆಂದು ಹಿಂದಿನ ದಫದಲ್ಲಿ ಹೇಳಿತ್ತು. ಈಗಿನ ಬಿಲ್ಲಿನಲ್ಲಿ ಆ ವಿಚಾರವನ್ನು ಸಹ ಕೈಬಿಡಲಾಗಿದೆ. ಹಿಂದಿನ ಬಿಲ್ಲಿನಲ್ಲಿ ಬೆಟರ್‌ಮೆಂಟ್ ಫೀಯನ್ನು ಸಹಿತ ಡಾ॥ ನಾಗನಗೌಡ ಸಮಿತಿಯ ವರದಿಯನ್ನು ಗಮನದಲ್ಲಿಟ್ಟುಕೊಂಡು ಫಿಕ್ಸ್ ಮಾಡಲಾಗುತ್ತೆಂತ ತಿಳಿಸಲಾಗಿತ್ತು. ಆದರೆ ಈಗ ನಮ್ಮ ಮುಂದಿರತಕ್ಕ ಬಿಲ್ಲಿನಲ್ಲಿ ನೋಡಿದರೆ ಆ ವಿಚಾರಗಳೊಂದೂ ಇಲ್ಲ. ಹೀಗೆ 'ಉಪ್ಪು-ಹುಳಿ' ಯಾವುದೂ ಇಲ್ಲದಂಥ ಒಂದು ಬಿಲ್ಲನ್ನು ತಂದು ಇದಕ್ಕೆ ಸದಸ್ಯರು ತಮ್ಮ ಒಪ್ಪಿಗೆಯನ್ನು ನೀಡಬೇಕೆಂದರೆ ಇದು ಸರ್ವಥಾ ಸರಿಯಲ್ಲವೆಂದು ಹೇಳುತ್ತೇನೆ.

ಈಗ ಆ ಬರ್ಮಾ ಮತ್ತು ಥೈಲ್ಯಾಂಡುಗಳಲ್ಲಿ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ವ್ಯವಸಾಯೋತ್ಪನ್ನವನ್ನು ಜಾಸ್ತಿಮಾಡಲು ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಸಲು ವ್ಯವಸಾಯಗಾರರಿಗೆ ಉಚಿತ ನೀರು ಸರಬರಾಯಿ ಮಾಡುತ್ತೇವೆಂದು ಅಲ್ಲಿಯ ಸರ್ಕಾರಗಳವರು ಹೇಳಿದ್ದಾರಂತೆ.

ಸರ್ಕಾರದವರು ಇಲ್ಲಿ ರೈತರು ಹೆಚ್ಚು ಆಹಾರ ಧಾನ್ಯಗಳನ್ನು ಬೆಳೆಯಬೇಕೆಂದು ಹೇಳುತ್ತಿರುವ ಕಾಲದಲ್ಲಿ ಹೀಗೇಕೆ ಆ ಬಡ ರೈತರ ಮೇಲೆ ಸರ್ಕಾರದವರು ಈ ಗದಾ ಪ್ರಹಾರ ಮಾಡುತ್ತಿದ್ದಾರೋ ನನಗೆ ತಿಳಿಯದು. ಈ ಹಿಂದೆ ಡಾ. ನಾಗನಗೌಡ ಸಮಿತಿಯವರು ಈ ವಾಟರ್ ರೇಟ್ ಮತ್ತು ಬೆಟರ್‌ಮೆಂಟ್ ಲೆವಿ ಬಗ್ಗೆ 600 ರೂಪಾಯಿಗಳನ್ನು ಶಿಫಾರಸ್ ಮಾಡಿದಾಗ ಆಗಿನ ಸನ್ನಿವೇಶಗಳನ್ನು ನೋಡಿಕೊಂಡು ಅದು ಬಹಳ ಜಾಸ್ತಿ ಆಯಿತೆಂದು ಆ ಮೊಬಲಗನ್ನು

500 ರೂಪಾಯಿಗಳಿಗೆ ಇಳಿಸಲಾಯಿತು. ಆದರೆ ಈ ದಿವಸವಾದರೋ ಆ ಬಡ ರೈತಾಪಿ ವರ್ಗದ ಮೇಲೆ ಕಂದಾಯ ಮಂತ್ರಿಗಳಾದ ಶ್ರೀ ಕಡಿದಾಳ್ ಮಂಜಪ್ಪನವರು ಭೂಕಂದಾಯದ ಮೇಲೆ ಸರ್‌ಛಾರ್ಜನ್ನು ವಿಧಿಸಬೇಕೆಂದು ಹೊರಟಿದ್ದಾರೆ. ಅದರ ಜೊತೆಗೆ ಭೂಕಂದಾಯವನ್ನು ಹೆಚ್ಚು ಮಾಡಲು ಈಗಾಗಲೇ ದೇಶವನ್ನೆಲ್ಲ ಸರ್ವೆ ಅಂಡ್ ಸೆಟಲ್‌ಮೆಂಟ್ ಪಾರ್ಟಿಯವರು ಸರ್ವೆ ಕಾರ್ಯ ನಡೆಸುತ್ತಿದ್ದಾರೆ. ಅಗ್ರಿಕಲ್ಚರಲ್ ಇನ್‌ಕಂಟ್ಯಾಕ್ಸ್ ಬೇರೆ ರೈತನ ಮೇಲೆ ಬಿದ್ದಿದೆ. ಇವೆಲ್ಲ ಸಾಲದೆಂದು ಹೇಳಿ ಈಗ ಈ ಬಿಲ್ಲನ್ನು ಬೇರೆ ತಂದಿದ್ದಾರೆ. ಇದರಿಂದ ಏನಾಗುತ್ತೆಂದರೆ ದೇಶದಲ್ಲಿ ಶ್ರೀಮಂತರು ಒಂದು ಕಡೆ ಇನ್ನೂ ಶ್ರೀಮಂತರಾಗುತ್ತಿದ್ದರೆ ಬಡ ರೈತನು ಈ ಹೊತ್ತು ಒಂದು ಒಳ್ಳೆ ಮನೆಯಲ್ಲಿ ವಾಸಿಸುವಂತಿಲ್ಲ, ಒಂದು ಒಳ್ಳೆ ಬಟ್ಟೆ ಹಾಕುವಂತಿಲ್ಲ! ಈಗಾಗಲೆ ಲ್ಯಾಂಡ್ ರಿಫಾರಂಸ್ ಬಿಲ್ಲಿನ ಬಗ್ಗೆ ನೇಮಕವಾಗಿದ್ದ ಸೆಲೆಕ್ಟ್ ಸಮಿತಿಯ ವರದಿ ಸರ್ಕಾರದವರ ಕೈಸೇರಿದೆ. ಅದರಲ್ಲಿ ರೈತನಿಗೆ ಒಂದು ಎಕರೆಯಲ್ಲಿ ಎಷ್ಟು ಕಾಳು ಬರುತ್ತೆ. ಅಷ್ಟೇ ಕೂಲಿ ವ್ಯವಸಾಯದ ಖರ್ಚು ಇತ್ಯಾದಿಗಳಿಗೆಲ್ಲ ಬಿಟ್ಟು ಉಳಿಯುವ ಕಾಳಿನಲ್ಲಿ ಅತನಿಗೇನು ಸಿಕ್ಕುತ್ತೆ? ಒಟ್ಟಿನಲ್ಲಿ ಅತನಿಗೆ ವರ್ಷಕ್ಕೆ 3,600 ರೂಪಾಯಿಗಳ ವರಮಾನವಿರಬೇಕೆಂದು ಹೇಳಿದ್ದಾರೆ. ಸರ್ಕಾರದವರು ಒಂದು ಕಡೆ ಹಾಗೆ ಹೇಳಿ ಇನ್ನೊಂದು ಕಡೆ ಹೀಗೆ ಹೇಳುವುದು ಸರ್ವಥ ನ್ಯಾಯವಾದುದಲ್ಲ. ಆದ್ದರಿಂದ ನಾನೀಗ ಹೇಳುವುದೇನೆಂದರೆ—ಮೊದಲು ಸರ್ಕಾರದವರು ಈ ಸಭೆಯ ಮುಂದೆ ಆ ಭೂಸುಧಾರಣೆ ಮಸೂದೆಯನ್ನು ತರಲಿ. ಆ ಮಸೂದೆಯ ಮೇಲೆ ಈ ಸಭೆಯವರು ಏನು ಅಭಿಪ್ರಾಯ ಕೊಡುತ್ತಾರೆಂಬುದನ್ನು ನೋಡಿ ಆನಂತರ ಈ ಬೆಟರ್‌ಮೆಂಟ್ ಲೆವಿ ಮತ್ತು ವಾಟರ್ ರೇಟಿನ ಬಿಲ್ಲನ್ನು ತಂದಿದ್ದರೆ ಚೆನ್ನಾಗಿತ್ತು. ಆದರೆ ಈ ದಿವಸ ದೈವದತ್ತವಾಗಿ ಬಂದ ಭೂ ವ್ಯವಸಾಯಗಾರರಿಗೆ ಇಂಥ ಕಿರುಕುಳವನ್ನುಂಟು ಮಾಡುವುದು—ಹಿಂಸೆಗೆ ಗುರಿಮಾಡುವುದು ಸರ್ವಥಾ ನ್ಯಾಯವಾದದ್ದಲ್ಲ. ಈ ಹಿಂದೆ ಈ ಬೆಟರ್‌ಮೆಂಟ್ ಆಕ್ಟಿನಲ್ಲಿ ಏನಿತ್ತೋ ಅಷ್ಟೇ ಇರಲಿ ಎಂತ ಹೇಳುತ್ತೇನೆ. ಈ ಹಿಂದೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯಲ್ಲಿ ಅಕೌಂಟೆಂಟ್ ಜನರಲ್‌ರವರು ಒಂದು ಆಕ್ಷೇಪಣೆಯನ್ನೆತ್ತಿದ್ದಾಗ ಈ ಆಕ್ಟಿಗಿನ್ನೂ ರೂಲ್ಸನ್ನು ಫ್ರೇಂ ಮಾಡಿಲ್ಲ ಎಂತ ಏನೋ ಒಂದು ಕುರುಡು ನೆಪ ಎತ್ತಿ ಹೇಳಿದರು. ಆ ದಿವಸ ಹಾಗೆ ಅಲ್ಲಿ ಹೇಳಿದ್ದ ಕಾರಣಕ್ಕೆ ಈಗ ಇಲ್ಲಿ ಒಂದು ತಿದ್ದುಪಡಿಯನ್ನು ತರಲಾಯಿತ್ತೇನು? ಇಲ್ಲಿಯತನಕ ಈ ಆಕ್ಟನ್ನು ಒಂದು ಕೋಲ್ಡ್‌ಸ್ಟೋರೇಜಿನಲ್ಲಿಟ್ಟು ಈಗ ನಾಲ್ಕು ವರ್ಷಗಳು ಕಳೆದ ನಂತರ ಹೀಗೆ ಒಂದು ತಿದ್ದುಪಡಿಯನ್ನು ತಂದುದು ಸರ್ವಥಾ ಸರಿಯಲ್ಲ. ಈಗ ಸಭೆಯ ಮುಂದಿಟ್ಟಿರತಕ್ಕ ತಿದ್ದುಪಡಿ ಮಸೂದೆಯನ್ನು ಸರ್ಕಾರದವರು ವಾಪಸ್ಸು ತೆಗೆದುಕೊಂಡು ಮತ್ತೊಮ್ಮೆ ಇದನ್ನು ಸುದೀರ್ಘವಾಗಿ ಪರಿಶೀಲನೆಮಾಡಬೇಕಾದ್ದು ಅತ್ಯಗತ್ಯವೆಂದು ಹೇಳಿ ನನ್ನ ಮಾತುಗಳನು ಮುಗಿಸುತ್ತೇನೆ.

†ಶ್ರೀ ಕೆ. ಕೆಂಚಪ್ಪ (ಹಿರಿಯೂರು).—ಮಾನ್ಯ ಅಧ್ಯಕ್ಷರೇ ಜಮೀನುಗಳಿಗೆ ನೀರನ್ನು ಕೊಡುವುದು, ಹೆಚ್ಚು ಬೆಳೆಯನ್ನು ಬೆಳೆಯಬೇಕೆಂಬುದೂ, ಈ ವಿಚಾರದಲ್ಲಿ ಜನರು ಒಂದು ವಾಟರ್ ರೇಟನ್ನು ಕೊಡತಕ್ಕದ್ದು ನ್ಯಾಯವಾದುದೇ ಸರಿ. ಆದರೆ ಇದಕ್ಕೆಲ್ಲ ಈ ಹಿಂದೆಯೂ ನಮ್ಮಲ್ಲಿ ಒಂದು ಕಾನೂನಿತ್ತು. ಈ ಹಿಂದೆ ಈ ವಾಟರ್ ರೇಟ್ ಮತ್ತು ಬೆಟರ್‌ಮೆಂಟ್ ಫೀ ಎರಡೂ ಸೇರಿ ಎಕರೆಗೆ 500 ರೂಪಾಯಿಗಳಿಗಿಂತ ಜಾಸ್ತಿ ಇರಬಾರದೆಂದು ಕಾನೂನಿನಲ್ಲಿ ಹೇಳಲಾಗಿತ್ತು. ಆದರೆ ಈಗ ಅದನ್ನು ಬದಲಾಯಿಸಲು ಬೇರೊಂದು ತಿದ್ದುಪಡಿಯನ್ನು ಈಗ ತಂದಿದ್ದಾರೆ. ಈಗ ಏಕಾಏಕಿ ಬದಲಾವಣೆ ಮಾಡಿ 500 ರೂಪಾಯಿಗಿಂತ ಹೆಚ್ಚಾಗಿ ಹಾಕಬಹುದು, ಹಾಗೆ ಹಾಕತಕ್ಕ ಸನ್ನಿವೇಶ ಬಂದಿದೆ ಎಂದು ಹೇಳುತ್ತಾರೆ. Betterment Contribution ಎನ್ನುವುದನ್ನು ಸರ್ಕಾರದ ಪ್ರಯತ್ನದಿಂದ ಜಮೀನು ಹೆಚ್ಚು ಅಭಿವೃದ್ಧಿಗೆ ಬಂದಿದೆ, ಅಥವಾ ಅದಕ್ಕೆ ಹೆಚ್ಚು ಬೆಲೆ ಬಂದಿದೆ ಎಂದು ಜನ ಕೊಡಬೇಕೆಂದು ಭಾವಿಸುವುದಾದರೆ, ಜಮೀನಿನ ಬೆಲೆಯನ್ನು ನಿಗದಿ ಮಾಡತಕ್ಕದ್ದು ಯಾವ ರೀತಿ ಎನ್ನುವುದು ಇದರಲ್ಲಿ ಕಾಣುವುದಿಲ್ಲ;

(ಶ್ರೀ ಕೆ. ಕೆಂಚಪ್ಪ)

ಜಮೀನಿನ ಬೆಲೆ ಹೆಚ್ಚಾಗುವುದಕ್ಕೆ ಅನೇಕ ಕಾರಣಗಳಿವೆ. ಮನಸ್ಸಿಗೆ ಬಂದಂತೆ ಲೆಕ್ಕಹಾಕಿ ಬೆಲೆ ಹೆಚ್ಚಾಗಿದೆ ಎನ್ನುವುದು ತುಂಬ ತಪ್ಪಾಗುತ್ತದೆ. Record of rights ನಲ್ಲಿರುವ survey and settlement classification ಎನ್ನತಕ್ಕದ್ದು ನೀರಾವರಿ ಜಮೀನಿಗೆ ಸಹ ಅನ್ವಯಿಸತಕ್ಕ ರೀತಿಯಲ್ಲಿ ಲ್ಯಾಂಡ್ ರೆವೆನ್ಯೂ ಕೋಡಿನ 112ನೆಯ ಸೆಕ್ಷನ್‌ನಲ್ಲಿ ಉಲ್ಲೇಖಿತವಾಗಿದೆ. ನೀರು ಬಿಡುವುದರಿಂದ ಒಂದು ಜಮೀನಿನಲ್ಲಿ, ಹೆಚ್ಚು ಉತ್ಪತ್ತಿಯಾಗುತ್ತದೆ, ಹೆಚ್ಚು ಬೆಳೆ ಬರುತ್ತದೆ ಎನ್ನುವುದಾದರೂ ಬರೀ ನೀರನ್ನು ಕೊಡುವುದರಿಂದ ಜಮೀನಿನ ಬೆಲೆ ಹೆಚ್ಚಾಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ, ಅದಕ್ಕೆ ಬೇರೆ ಕಾರಣಗಳಿವೆ. ಈ ವಿಚಾರವಾಗಿ ನನ್ನ ಮಾನ್ಯ ಮಿತ್ರರು ಈಗಾಗಲೇ ಹೇಳಿರುವುದರಿಂದ ನಾನು ಅದರ ಪ್ರಸ್ತಾಪ ಮಾಡುವುದಿಲ್ಲ. ಕಂಟ್ರಿಬ್ಯೂಷನ್ ತೆಗೆದು ಕೊಳ್ಳತಕ್ಕದ್ದು ಜಮೀನಿಗೆ ಸಂಬಂಧಪಟ್ಟಿದ್ದೋ ಅಥವಾ ನಾವು ಖರ್ಚು ಮಾಡುವುದಕ್ಕೆ ಸಂಬಂಧ ಪಟ್ಟಿದ್ದೋ ಎನ್ನುವ ವಿಚಾರದಲ್ಲಿ ಸ್ವಲ್ಪ ಅನುಮಾನವಾಗಿದೆ. ಯಾವುದಾದರೂ ಒಂದು ಸ್ಥಳದಲ್ಲಿ ಸುಮಾರು 18 ಸಾವಿರ ಎಕರೆ ಜಮೀನು ಸಾಗುವಳಿಗೆ ಬರತಕ್ಕ ಕೆರೆ ಕಟ್ಟಲು ಒಂದೂವರೆ ಕೋಟಿ ರೂಪಾಯಿ ಖರ್ಚಾಗಬಹುದು, ಮತ್ತೊಂದು ಕಡೆ ಇನ್ನೊಂದು ರೀತಿ ಖರ್ಚಾಗಬಹುದು. ಮುಖ್ಯವಾಗಿ ಕಂಟ್ರಿಬ್ಯೂಷನ್ ಎಂದರೆ ಈ ರೀತಿ ನಾವು ಎಷ್ಟು ಖರ್ಚು ಮಾಡಿದ್ದೇವೆ ಎನ್ನುವ ಪದಕ್ಕೆ ಅನ್ವಯಿಸುವುದಿಲ್ಲ, ಜಮೀನು ಬೆಲೆ ಎಷ್ಟರ ಮಟ್ಟಿಗೆ ಹೆಚ್ಚಾಗಿದೆ ಎನ್ನುವ ಮಾತೇ ಬೇರೆ ಈ ದೃಷ್ಟಿಯಿಂದ ನಾನು ಇದನ್ನು ಒಪ್ಪುವುದಿಲ್ಲ.

ಇನ್ನೊಂದು ವಿಚಾರವೇನೆಂದರೆ ಕಂಟ್ರಿಬ್ಯೂಷನ್ ಎಂದರೆ ಜನರು ಕೊಡತಕ್ಕ ಒಂದು ಸಹಾಯ. ಸರ್ಕಾರದವರು ಒಂದು ಸಾವಿರ ರೂಪಾಯಿ ಖರ್ಚು ಮಾಡಿದರೆ, ಜನರಿಂದ ಒಂದು ಸಾವಿರ ರೂಪಾಯಿ ವಸೂಲ್ಮಾಡಬೇಕೆನ್ನುವುದು ಇದುವರೆಗೂ ನಮ್ಮಲ್ಲಿದ್ದ ಭಾವನೆ. ಆದರೆ ಈಗ ಮಾಡು ತ್ತಿರುವ ಬದಲಾವಣೆಗಳಿಂದ ಸರ್ಕಾರದವರು ವರ್ತಕ ರೀತಿಯಲ್ಲಿ ವರ್ತಿಸುತ್ತಿದ್ದಾರೆ ಎನ್ನುವ ಭಾವನೆ ಬರುತ್ತದೆ. ದಯವಿಟ್ಟು ಈ ವಿಚಾರವನ್ನು ಆಲೋಚನೆ ಮಾಡಬೇಕಾಗುತ್ತದೆ.

ಈಗ ತಂದಿರುವ ಮಸೂದೆ 1932 ರಲ್ಲಿ ಪಾಸ್ ಆಗಿರುವ ಮೈಸೂರು ಇರಿಗೇಷನ್ ಆಕ್ಟಿನ 29ನೇ ಸೆಕ್ಷನ್ನಿಗೆ ವಿರೋಧವಾಗುತ್ತದೆ. ನಾನು ಸೆಕ್ಷನ್ 29 (2) ಓದುತ್ತೇನೆ.

> "The contribution referred to in clause (*b*) of sub-section(1) shall not in the case of restoration or improvement of any minor tank exceed two hundred rupees per acre in respect of the lands in the benefited area."

ಇಲ್ಲಿ ತಾವು ಕಂಟ್ರಿಬ್ಯೂಷನ್ ಮೊಬಲಗನ್ನು ಕೆರೆ ಕಟ್ಟಿದ್ದಕ್ಕೆ ಅಥವಾ ಹೊಸದಾಗಿ ಕಟ್ಟಿದ್ದಕ್ಕೆ ಮಾತ್ರ ಅನ್ವಯಿಸುವ ಹಾಗೆ ಮಾಡದೆ ಅದನ್ನು ಉತ್ತಮ ಪಡಿಸುವುದಾಗಲೀ, ದುರಸ್ತು ಬಡಿಸು ವುದಾಗಲೀ, ಎಲ್ಲಕ್ಕೂ ಅನ್ವಯಿಸುವ ಹಾಗೆ ತಂದಿದ್ದೀರಿ. ಈ ಕಲಮು ಆ ಭಾವನೆಗೆ ವಿರೋಧ ವಾಗುತ್ತದೆ. ಏಕೆಂದರೆ ಇರಿಗೇಷನ್ ಆಕ್ಟಿನ ಸೆಕ್ಷನ್ 29 (2)ರಲ್ಲಿ ಮೈನರ್ ಇರಿಗೇಷನ್ ಸಂಬಂಧ ದಲ್ಲಿ ಒಂದು ಎಕರೆಗೆ 200 ರೂಪಾಯಿಗಿಂತ ಹೆಚ್ಚಾಗಿ ಕಂಟ್ರಿಬ್ಯೂಷನ್ ಆಗ ರಾರದು ಎನ್ನುವುದನ್ನು ಹೇಗೆ ನಿಭಾಯಿಸುತ್ತೀರಿ? ಇದಕ್ಕೆ ತಾವು ಯಾವ ರೀತಿ ಸಮಾಜಾಯಿಷಿ ಕೊಡುತ್ತೀರಿ? ಅದಕ್ಕೂ ಇದಕ್ಕೂ ವಿರೋಧ ಬರುವುದಿಲ್ಲವೇ? ನಾನು ಇದನ್ನು ತುಂಬ ಲಂಬಿಸಿ ಮಾತನಾಡುವುದಕ್ಕೆ ಇಷ್ಟಪಿಲ್ಲ. ನಮ್ಮ ಮಿತ್ರರು ಹೇಳಿದ ಹಾಗೆ ಇದ ತೆರಿಗೆಯೋ ಅಥವಾ ಫೀಸೋ ಗೊತ್ತಿಲ್ಲ. ಕಂಟ್ರಿಬ್ಯೂಷನ್ ಲೆವಿ ಎನ್ನುವ ಪದಗಳನ್ನು ಉಪಯೋಗಿಸಬಹುದು. Levy ಎನ್ನುವ ಪದವನ್ನು ಏತಕ್ಕೋಸ್ಕರ ಉಪಯೋಗಿಸಿದ್ದೀರಿ, ಅದರ ಅರ್ಥ ಏನು ಎನ್ನುವುದನ್ನು ಹೇಳಲೇ ಬೇಕು. Is it for the service you are rendering for the society? Or is it the contribution you are expecting from the people for the irrigation project

you construct or is it a tax? You may fix anything as tax but there must be some reasons for evaluating the serv ce rendered to the society. ಕನ್ನಡದಲ್ಲಿ ಇದನ್ನು ಅಷ್ಟು ಚೆನ್ನಾಗಿ ಹೇಳುವುದಕ್ಕೆ ಬಾರದೇ ಇದ್ದುದರಿಂದ ಇಂಗ್ಲೀಷಿನಲ್ಲಿ ಹೇಳಿದ್ದೇನೆ, ಆದುದರಿಂದ ಪದಗಳನ್ನು ಉಪಯೋಗಿಸಬೇಕಾದರೆ ಹುಷಾರಾಗಿರಬೇಕು.

ಆ ಮೇಲೆ ಹತ್ತನೆಯ ಕಲಮಿಗೆ ತಿದ್ದುಪಡಿ ಮಾಡಲು ಹೊರಟಿದ್ದಾರೆ. ಇದು ತೀರಾ ಅನ್ಯಾಯ. ಇದುವರೆಗೂ ಇದ್ದದ್ದರಲ್ಲಿ ಕೆಲವಾರು ಸಂದರ್ಭದಲ್ಲಿ ಹೆಚ್ಚಿಗೆ ಕಂದಾಯ ಹಾಕಬಾರ ದೆನ್ನುವ ವಿಚಾರವಿತ್ತು, ಯಾವುದಾದರು ಒಂದು ಸಂದರ್ಭದಲ್ಲಿ ನೀರಾವರಿ ಕಂದಾಯ ಹಾಕಿದ್ದರೆ ಮತ್ತೆ ಅದಕ್ಕೆ ಇನ್ನೂ ಯಾವುದಾದರೂ ಒಂದು ಸಂದರ್ಭದಲ್ಲಿ ಬೇರೆ ಒಂದು ಪ್ರಾಜೆಕ್ಟಿನಿಂದ ಅಥವಾ ಬೇರೆ ಒಂದು ಕೆರೆಯಿಂದ ನೀರು ಹಾಯಿಸಬಹುದು, ಅಂಥ ಸಂದರ್ಭಗಳಲ್ಲಿ ಈ ಮಸೂದೆಯ ಪ್ರಕಾರ ನೀರು ಕಂದಾಯ ಹಾಕಬಹುದು ಎಂದು ಹೇಳುತ್ತಾರೆ. 1902 ನೆಯ ಇಸವಿಗೆ ಹಿಂದೆ ಸಂಸ್ಥಾನದಲ್ಲಿ ಬಾವಿಗಳಿಂದ ನೀರನ್ನು ತೆಗೆದುಕೊಂಡು ವ್ಯವಸಾಯ ಮಾಡುವ ಜಮೀನುಗಳಿಗೆ ನೀರಾವರಿ ಕಂದಾಯವನ್ನು ಹಾಕಿದ್ದಾರೆ ಅದಕ್ಕೆ garden assessment ಅಥವಾ ಬಾಗಾಯತು ಕಂದಾಯ ಎಂದು ಹಾಕಿದ್ದಾರೆ. ಈಗ ಮತ್ತೆ ನೀರನ್ನು ಕೊಟ್ಟರೆ ಅದರ ಮೇಲೆ ನೀರು ಕಂದಾಯ ಹಾಕುವುದಕ್ಕೆ ಸಾಧ್ಯವಿದೆ. ಆದರೆ land revenue code ಪ್ರಕಾರ ಎರಡು ನಮೂನೆ ಕಂದಾಯ ಹಾಕುವುದಕ್ಕೆ ಸಾಧ್ಯವಿಲ್ಲ. ಇದನ್ನು ಯೋಚನೆ ಮಾಡಬೇಕು. ಈಗ ಒಂದು ಕೆರೆಯಿಂದ ಜಮೀನಿಗೆ ನೀರು ಬರುತ್ತಿರುತ್ತದೆ, ಅದೇ ಕೆರೆಯ ನೀರು ಇನ್ನೊಂದು ಕಡೆ ಜೋಪು ನೀರಾಗಿ ಬರುತ್ತದೆ ಅದಕ್ಕೆ ಪಿಕ್ ಅಪ್ ಕಟ್ಟಿ ಅದೇ ನೀರನ್ನು intermittent supply ಇರುವುದನ್ನು ತಪ್ಪಿಸಿ, Continuous supply ಮಾಡಿದರೆ, ಜೋಪು ನೀರನ್ನು ಒದಗಿಸಿ ದ್ದಕ್ಕಾಗಿ ಬೇರೆ tax ಹಾಕಬೇಕಾಗುತ್ತದೆ. ಯಾವುದಾದರೂ ಒಂದು ಜಮೀನಿಗೆ ಕೆರೆಯ ನೀರನ್ನು ಎಂಟು ದಿನಕ್ಕೆ ಒಮ್ಮೆ ಕೊಡುತ್ತಿದ್ದು, ಆ ಜಮೀನಿನ ಪಕ್ಕದಲ್ಲಿ ಒಂದು ನದಿಯಿದ್ದರೆ ಕೆರೆಯಿಂದ ಕೊಡುವ ನೀರು ಸಾಲಾಗ ವುದಿಲ್ಲವೆಂದು ನದಿಯ ನೀರನ್ನು ತೆಗೆದುಕೊಂಡು ಉಪಯೋಗಿಸಿದರೆ, ಅದರ ಮೇಲೆ ಸರ್ಕಾರದವರು Water rate ಗೊತ್ತುಮಾಡಿದರೆ, ಅಂಥ ಸಂದರ್ಭದಲ್ಲಿ ಆ ಜಮೀ ನಿನ ಮೇಲೆ wet assessment ಹಾಕುತ್ತಾರೆಯೋ ಅಥವಾ Water rate ಹಾಕುತ್ತಾರೆಯೋ? ಈ ಸಂದರ್ಭದಲ್ಲಿ wet assessment ಎಂದರೆ ಏನು ಎನ್ನುವುದನ್ನು ತಿಳಿದುಕೊಳ್ಳಬೇಕು. Wet assessment ಎಂದರೆ ತರಿ ಭೂಮಿ ಎಂದು ಒಂದು ಸಲ ಗೊತ್ತು ಮಾಡಿ ಕಂದಾಯ ಹಾಕುವುದು. ಇದಕ್ಕೆ Water rate ಹಾಕಿದರೆ ಕಾನೂನಿಗೆ ವಿರೋಧವಾಗುತ್ತದೆ.

ಈ ಕಾನೂನಿನ ಹತ್ತನೆಯ ಕಲಮಿನ ಪ್ರಾವಿಸೋದಲ್ಲಿ,

> "Provided that no water rate shall be leviable under this Act in respect of water supplied or used for the irrigation of land which is classified and assessed as wet, unless the land be irrigated, whether Voluntarily or involuntarily, and whether wholly or in part."

ಎಂದು ಹೇಳಿದ್ದಾರೆ. ನಮ್ಮಲ್ಲಿ ಯಾವುದಾದರೂ ಒಂದು irrigation project ತೆಗೆದು ಕೊಳ್ಳೋಣ. ಉದಾಹರಣೆಗೆ ಕೃಷ್ಣರಾಜಸಾಗರದ ನೀರನ್ನು ಜಮೀನುಗಳಿಗೆ ಕೊಡುವಾಗ, ಆ ಜಮೀನಿನ ಪಕ್ಕದಲ್ಲಿರುವ ಕಾರಣದಿಂದ ಬೇರೆ ಒಂದು ಜಮೀನಿಗೆ intermittent ಆಗಿ ನೀರನ್ನು ಕೊಡಬಹುದು. ಆ ರೀತಿ ಕೊಡುವ ನೀರು ಸಾಲದೆ ಬೇರೆ ನೀರನ್ನು ತೆಗೆದುಕೊಂಡರೆ, ಅದಕ್ಕೆ ಬೇರೆ tax ಹಾಕಲು ಸಾಧ್ಯವೇ? ಅಥವಾ ಒಂದು piceout ಅಥವಾ drainage ಕಟ್ಟಿ, ಅದರಿಂದ ಆ ಜಮೀನಿಗೆ ನೀರು ಒಂದೇ ಸಮನಾಗಿ ದೊರಕುತ್ತ ಹೋದರೆ, ಅದು ದೇಶದ ಹಿತಕ್ಕೋಸ್ಕರ ಮಾಡಿದಂಥ ಕೇಸು. ಇದಕ್ಕಾಗಿ wet assessment ಜೊತೆಗೆ Water rate ಹಾಕುವುದು ಸರಿಯೇ ಎಂದು ಯೋಚನೆ ಮಾಡಬೇಕು.

(ಶ್ರೀ ಕೆ. ಕೆಂಚಪ್ಪ)

ಅದರಿಂದ ದೇಶಕ್ಕೆ ತುಂಬಾ ಹಾನಿಯಾಗುತ್ತದೆ. ಇದು ಸುಖೀರಾಜ್ಯದ ಲಕ್ಷಣವಲ್ಲ. ಖಂಡಿತವಾಗಿಯೂ, ಜನ ಉಳಿಯುವುದಿಲ್ಲ. ಈ ರೀತಿ ಆಗಬಾರದಾಗಿತ್ತು. ಈ ವಿಚಾರವನ್ನು ನಾನು ಪುನರುಕ್ತಿ ದೋಷ ಮಾಡಿಕೊಳ್ಳದೆ ಅಲ್ಪ ಸ್ವಲ್ಪ ಕಾನೂನಿನ ಭಾಗವನ್ನು ಹೇಳಿದ್ದೇನೆ. ದಯವಿಟ್ಟು ಆ ಭಾಗವನ್ನು ದೀರ್ಘವಾಗಿ ಆಲೋಚನೆ ಮಾಡಿ ಅದನ್ನು ಸರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎಚ್. ಕೆ. ವೀರಣ್ಣಗೌಡ (ಲೋಕೋಪಯೋಗಿ ಹಾಗೂ ವಿದ್ಯುಚ್ಛಕ್ತಿ ಶಾಖೆಯ ಮಂತ್ರಿಗಳು).-ಸ್ವಾಮಿ ಸರಳವಾದಂಥ ಈ ಮಸೂದೆಯ ಮೇಲೆ ಈ ತರಹ ವ್ಯಾಖ್ಯಾನ ಹೊರಡುತ್ತದೆ ಎಂದು ನಾನು ಭಾವಿಸಿರಲಿಲ್ಲ. ಆಶಾವ್ಯಾಖ್ಯಾನವನ್ನು ಕೇಳಿ ನನಗೆ ಸುಸ್ತು ಆಗಿದೆ ಎಂದು ಸಭೆಯ ಮುಂದೆ ಒಪ್ಪಿಕೊಳ್ಳಬೇಕು. ಬಹುಶಃ ನನ್ನಲ್ಲೇ ತಪ್ಪು ಇರಬೇಕು ಎಂದು ಅನ್ನಿಸುತ್ತದೆ. ಪ್ರಾರಂಭದಲ್ಲಿ ನಾನು ಈ ಮಸೂದೆಯನ್ನು ಸಭೆಯ ಮುಂದೆ ಇಡುತ್ತಾ ಹೇಳಿದಂತ ಕೆಲವು ಮಾತುಗಳನ್ನು ಕೇಳಿ ಬಹುಶಃ ನನ್ನ ಭಾಷೆಯ ದೋಷದಿಂದ ನನ್ನ ಸ್ನೇಹಿತರು ಈ ರೀತಿ ವ್ಯಾಖ್ಯಾನ ಮಾಡಿದರೋ ಏನೋ ಎಂದು ನನಗೆ ಅನ್ನಿಸುತ್ತದೆ. ಇಲ್ಲದೆ ಇದ್ದರೆ ಈ ರೀತಿ ವ್ಯಾಖ್ಯಾನ ಮಾಡುವುದಕ್ಕೆ ಕಾರಣವಿಲ್ಲ. ದೇಶ ಉಳಿದಿದೆಯೇ, ರೈತರನ್ನು ಏತಕ್ಕೆ ಹಾಳು ಮಾಡಿದರು, ರೈತರ ಮನೆಯಲ್ಲಿ ಹುಟ್ಟಿದಂಥ ವೀರಣ್ಣಗೌಡರೇ ಅಧಿಕಾರದಲ್ಲಿ ಬಂದು ಹಳ್ಳಿಯಲ್ಲಿರುವ ರೈತರಿಗೆ, ತೊಂದರೆಯನ್ನುಂಟುಮಾಡಿದ್ದಾರೆ ಎಂದು ಹೇಳಿದರು. ಅದಕ್ಕೂ ಇದಕ್ಕೂ ಏನು ಸಂಬಂಧ ? ದೇಶಾದ್ಯಂತ ರೈತರಿಗೆ ಲೆವಿ ಹಾಕಿದ್ದೇವೆಯೇ, ಅಥವಾ ಕಂದಾಯವನ್ನು ಹಾಕಿದ್ದೇವೆಯೇ ? ಇದುವರೆಗೂ ಏನಾದರೂ ಹೊಸದಾಗಿ ಒಂದು ಕೆಲಸ ಮಾಡಬೇಕಾದರೆ 500 ರೂಪಾಯಿಗಳನ್ನು ರೈತರು ಕೊಡುತ್ತಿದ್ದರು. ಈಗ ಅದು ಸಾಲುವುದಿಲ್ಲ, 600 ರೂಪಾಯಿಗಳನ್ನು ಕೊಡಿ, 800 ರೂಪಾಯಿಗಳನ್ನು ಕೊಡಿ ಎಂದು ಹೇಳಿದರೆ ಅದರಿಂದ ದೇಶ ಮುಳುಗಿ ಹೋಗುತ್ತದೆಯೇ ? ರೈತರು ಹಾಳಾಗುತ್ತಾರೆಯೇ ? ಕ್ಷೋಭೆ ಉಂಟಾಗುತ್ತದೆಯೇ ? ಅಂಥಾದ್ದು ಏನೂ ಇಲ್ಲ. ಅವರು ಹೇಳುವುದಕ್ಕೂ ಈ ಮಸೂದೆಗೂ ಏನೂ ಸಂಬಂಧವಿಲ್ಲ. ಏತಕ್ಕೆ ಆ ರೀತಿ ಹೇಳುತ್ತಾರೋ ನನಗಂತೂ ಅರ್ಥವಾಗುವುದಿಲ್ಲ. ಒಂದು ಕೆರೆಯನ್ನು ಕಟ್ಟಿಸಿದರೆ, ಒಂದು ನೀರಾವರಿ ಯೋಜನೆಯನ್ನು ಮಾಡಿದರೆ, ಎಷ್ಟು ಹಣ ಸಾಮಾನ್ಯವಾಗಿ ಖರ್ಚಾಗುತ್ತದೆ ಎನ್ನುವುದಕ್ಕೆ, ಕೂಲಿ, ಸಾಮಾನಿನ ಬೆಲೆ ಮುಂತಾದುವನ್ನು ಲೆಖ್ಖ ಹಾಕಿಕೊಂಡು ಒಂದು ಎಕರೆಗೆ ಇಷ್ಟು ಆಗಬಹುದು ಎಂದು ಅಂದಾಜು ಮಾಡುತ್ತಿದ್ದೆವು ಒಂದು ಎಕರೆಗೆ ಒಂದು ಸಾವಿರ ರೂಪಾಯಿಗಳು ಖರ್ಚು ಆಗುವ ಹಾಗಿದ್ದರೆ ತೆಗೆದುಕೊಳ್ಳೋಣ. ಮೂರು-ನಾಲ್ಕು ಸಾವಿರ ರೂಪಾಯಿಗಳು ಖರ್ಚು ಆಗುವ ಹಾಗಿದ್ದರೆ ಅದು ಅನ್‌ರೆಮ್ಯುನರೇಟೀವ್ ಆಗುತ್ತದೆ. ಸಾಮಾನ್ಯವಾಗಿ ಒಂದು ಎಕರೆಗೆ ಒಂದು ಸಾವಿರ ರೂಪಾಯಿಗಳು ಖರ್ಚಾದರೆ 100 ಎಕರೆಗೆ ನೂರು ಸಾವಿರ ರೂಪಾಯಿಗಳು ಅಥವಾ ಒಂದು ಲಕ್ಷ ಆಗುತ್ತದೆ. ಅದನ್ನು ಒಪ್ಪಿಕೊಳ್ಳೋಣ. ಎರಡು ಮೂರು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ 100 ಎಕರೆಗೆ ನೀರು ಕೊಡಿ ಎಂದರೆ ಖರ್ಚು ಜಾಸ್ತಿ ಆಗುತ್ತದೆ. ಆ ದೃಷ್ಟಿಯಿಂದ ಒಂದು ಎಕರೆಗೆ ಒಂದು ಸಾವಿರ ರೂಪಾಯಿಗಳು ಖರ್ಚಾಗುತ್ತಾ ಇದ್ದರೆ ಅವರಿಗೆ 450-350 ರೂಪಾಯಿಗಳನ್ನು ಹಾಕಬೇಕು ಎನ್ನುವ ದೃಷ್ಟಿ ಇತ್ತು. ಇವತ್ತು ಒಂದು ಎಕರೆಗೆ 1,250 ರೂಪಾಯಿಗಳು ಆದರೂ ಚಿಂತೆಯಿಲ್ಲ, ಅದನ್ನು ತೆಗೆದುಕೊಳ್ಳೋಣ ಎಂದು ಸರ್ಕಾರದವರು ನೀತಿಯನ್ನು ಅನುಸರಿಸುತ್ತಿದ್ದಾರೆ. ಆ ದೃಷ್ಟಿಯಿಂದ ನೋಡಿದರೂ 1,250 ರೂಪಾಯಿಗಳ ಅರ್ಧಭಾಗ ಎಂದರೆ 625 ರೂಪಾಯಿಗಳ ಕಾಂಟ್ರಿಬ್ಯೂಷನ್ ಕೇಳಬಹುದು ಎಂದಾಗುತ್ತದೆ. ಮೊದಲನೆಯದಾಗಿ ಇದು ಸಾರ್ವತ್ರಿಕವಾಗಿ ಅನ್ವಯಿಸುವುದಿಲ್ಲ. ಇದುವರೆಗೆ ಆಗಿರತಕ್ಕ ಕೆಲಸಗಳಿಗೂ ಇದು ಅನ್ವಯಿಸುವುದಿಲ್ಲ. ಮುಂದೆ ಯಾವುದಾದರೂ ನೀರಾವರಿ ಕಾಮಗಾರಿಯನ್ನು ತೆಗೆದುಕೊಂಡರೆ

ಆದರ ಖರ್ಚು ಪೈಕಿ ರೈತರು ಎಷ್ಟು ಭಾಗ ಕೊಡಬೇಕು ಎನ್ನುವುದರಲ್ಲಿ 500 ರೂಪಾಯಿ ಎಂದು ನಿಲ್ಲಿಸಬೇಡಿ, ಅದು ಸಾಧ್ಯವಾಗುವುದಿಲ್ಲ. ನೀರಾವರಿ ಆಗುವುದರಿಂದ ಜಮೀನಿನ ಬೆಲೆ ಎಷ್ಟರ ಮಟ್ಟಿಗೆ ಏರುತ್ತದೋ ಅಷ್ಟರ ಮಟ್ಟಿಗೆ ನಾವು ಕಾಂಟ್ರಿಬ್ಯೂಷನ್ ಹಾಕಬಹುದು. ಶ್ರೀ ಮಲ್ಲಾರಾಧ್ಯರು ಆಕ್ಷೇಪಣೆ ಮಾಡಿ ಹೊರಟು ಹೋದರು. ಒಂದು ಎಕರೆಗೆ ನಾಲ್ಕು ಸಾವಿರ ರೂಪಾಯಿಗಳಷ್ಟು ಬೆಲೆ ಇದ್ದರೆ ಅದಕ್ಕೆ 3500 ರೂಪಾಯಿಗಳ ಕಾಂಟ್ರಿಬ್ಯೂಷನ್ ಹಾಕುವುದಕ್ಕಾಗುತ್ತದೆಯೇ? ಅವರು ಏತಕ್ಕೆ ಹಾಗೆ ಅರ್ಥಮಾಡಿಕೊಂಡಿರೋ ನನಗೆ ಗೊತ್ತಾಗುವುದಿಲ್ಲ. ಇನ್ನೊಬ್ಬರು ಸ್ನೇಹಿತರು ಹೇಳಿದ ಹಾಗೆ ಜಮೀನಿನ ಬೆಲೆ ಹೆಚ್ಚಬೇಕಾದರೆ ಅನೇಕ ಕಾರಣಗಳಿವೆ. ಉದಾಹರಣೆಗೆ ವಿಶ್ವೇಶ್ವರಯ್ಯ ನಾಲೆಯ ಕೆಳಗೆ ತೆಗೆದುಕೊಳ್ಳೋಣ. ಒಂದು ಎಕರೆಗೆ ಎರಡು ಸಾವಿರ ರೂಪಾಯಿ ಬೆಲೆ ಇರುತ್ತದೆ. ಜಮೀನಿನ ಪಕ್ಕದಲ್ಲಿ ರಸ್ತೆ ಹೋಗುವುದಾದರೆ ಅಂಥ ಜಮೀನು ಎಕರೆಗೆ ಮೂರು ಮೂರುವರೆ ಸಾವಿರ ರೂಪಾಯಿಗಳು ಆಗುತ್ತದೆ. ಹಾಗೆಯೇ ಮಂಡ್ಯದ ಕೆಲವು ಭಾಗಗಳಲ್ಲಿ ಜಮೀನಿಗೆ ಎಷ್ಟು ಬೆಲೆ ಇದೆಯೋ ಮಳವಳ್ಳಿಯಲ್ಲಿ ಅಷ್ಟು ಬೆಲೆ ಇಲ್ಲ, ಏತಕ್ಕೆಂದರೆ ಸಕ್ಕರೆಯ ಕಂಪೆನಿಯ ಅನುಕೂಲಕ್ಕೆ ಅವರಿಗೆ ದೊರೆಯುತ್ತಿಲ್ಲ. ಜಮೀನಿನ ಬೆಲೆ ಏರುವುದು ಎಂದರೆ ಅನೇಕ ಕಾರಣಗಳಿವೆ, ಅವನ್ನು ಒಪ್ಪಿಕೊಳ್ಳುತ್ತೇನೆ. ಈ ದೃಷ್ಟಿಯಿಂದ ಜಮೀನಿನ ಬೆಲೆ ಎಷ್ಟು ಏರುತ್ತದೆ ಎಂಬುದನ್ನು ಗಮನಿಸಿ ಜಮೀನಿನ ಬೆಲೆ ಎಷ್ಟು ಏರಬಹುದೋ ಅದರ ಪೈಕಿ ಎಷ್ಟು ಹಾಕಬಹುದು ಎಂಬುದನ್ನು ಯೋಚನೆ ಮಾಡಿ ಹಾಕುತ್ತೇನೆಯೇ ಹೊರತು ಜಮೀನಿನ ಬೆಲೆ ಏರಿದಾಕ್ಷಣ ಅಷ್ಟೇ ಕಾಂಟ್ರಿಬ್ಯೂಷನ್ ಹಾಕಬೇಕು ಎನ್ನುವುದಲ್ಲ. ಶೇಕಡ ಮೂರು ರೂಪಾಯಿ ಬಡ್ಡಿ ಅಥವಾ ಪ್ರಯೋಜನ ಬರುವಂತೆ ಹಾಕುತ್ತೇವೆ, ಎಂದರೆ 500 ರೂಪಾಯಿಗಳಿಗೆ 2½ ಪರ್ಸೆಂಟ್ 650 ರೂಪಾಯಿಗಳಿಗೆ ಮೂರು ಪರ್ಸೆಂಟ್ ಇರುತ್ತದೆ. 650 ರೂಪಾಯಿಗಳನ್ನು ಹಾಕಬೇಕು ಎಂದರೆ ತೊಂದರೆ ಮಾಡುತ್ತೀರಿ, ಜಮೀನಿನ ಬೆಲೆ ಮೂರು ಸಾವಿರ ರೂಪಾಯಿಗಳು ಆದರೆ ಮೂರು ಸಾವಿರ ರೂಪಾಯಿಗಳ ಕಂಟ್ರಿಬ್ಯೂಷನ್ ಕೇಳುತ್ತೀರಿ ಎಂದು ಹೇಳುವುದು ಸರಿಯಲ್ಲ. ಹಾಗೆ ಮಾನ್ಯ ಸ್ನೇಹಿತರು ಅರ್ಥಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲ, ಲೋಕಲ್ ಆಫೀಸರುಗಳು ಯಥಾವ್ಯತದಲ್ಲಿ ಕರ್ತವ್ಯ ಮಾಡುವುದಕ್ಕೆ ಜನಗಳಿಗೆ ಹಿಂಸೆ ಮಾಡುವುದಕ್ಕೆ ಅವಕಾಶ ಕೊಡುತ್ತಾರೆ ಎಂದು ಹೇಳಿದರು. ಲೋಕಲ್ ಆಫೀಸರುಗಳ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ. ಇದು ಮೈಸೂರು ಸಂಸ್ಥಾನದ ಎಲ್ಲಾ ಕಡೆಗೂ ಅನ್ವಯಿಸತಕ್ಕ ಕಾನೂನು ಅಲ್ಲ. ಹೊಸದಾಗಿ ಎಲ್ಲಿ ಕೆರೆ ಕಾಮಗಾರಿಯನ್ನು ಎಲ್ಲಿ ತೆಗೆದುಕೊಳ್ಳುತ್ತೇವೆಯೋ ಅಲ್ಲಿ ಈ ಪ್ರಶ್ನೆ ಬರುತ್ತದೆ. ಎರಡನೆಯದಾಗಿ ಲೋಕಲ್ ಆಫೀಸರುಗಳಿಗೂ ಇದಕ್ಕೂ ಏನೂ ಸಂಬಂಧವಿಲ್ಲ. ಇನ್ವೆಸ್ಟಿಗೇಷನ್ ಮಾಡುತ್ತಾರೆ, ಎಸ್ಟಿಮೇಟ್ ತಯಾರು ಮಾಡುತ್ತಾರೆ ಎಗ್ಸಿಕ್ಯೂಟಿವ್ ಇಂಜಿನಿಯರು, ಸೂಪರಿನ್‌ಟೆಂಡಿಂಗ್ ಇಂಜಿನಿಯರು, ಚೀಫ್ ಇಂಜಿನಿಯರು ಇವರುಗಳೆಲ್ಲರೂ ಸ್ಕ್ರೂಟಿನಿ ಮಾಡಿ ನಂತರ ಸರ್ಕಾರಕ್ಕೆ ವರದಿ ಬರುತ್ತದೆ, ಅಂಥಾ ಕೆಲಸಗಳಿಗೆ ಎಷ್ಟು ಖರ್ಚಾಗುತ್ತದೆ, ಎಷ್ಟು ಎಕರೆ ಸಾಗುವಳಿಗೆ ಸಿಕ್ಕುತ್ತದೆ ಎಷ್ಟು ಕಾಂಟ್ರಿಬ್ಯೂಷನ್ ಹಾಕಿದರೆ ಮೂರು ಪರ್ಸೆಂಟ್ ಆಗುತ್ತದೆ ಅಥವಾ ಎಷ್ಟು ಪರ್ಸೆಂಟ್ ವಾಟರ್ ರೇಟ್ ಹಾಕಿದರೆ ರೀಜನಬಲ್ ಆಗಿರುತ್ತದೆ ಎಂಬುದನ್ನು ವರದಿ ಬಂದಮೇಲೆ ಸರ್ಕಾರದವರು ನಿಗದಿ ಮಾಡುತ್ತಾರೆ. ಎಷ್ಟು ಕಾಂಟ್ರಿಬ್ಯೂಷನ್ ಹಾಕಬಹುದು, ಎಷ್ಟು ವಾಟರ್ ರೇಟ್ ಹಾಕ ಹಾಕಬಹುದು ಎಂದು ಆ ಚೌಕಟ್ಟಿನ ಒಳಗೆ ಅಧಿಕಾರಿಗಳು ಕೆಲಸ ಮಾಡಬೇಕೇ ಹೊರತು ಪ್ರಾಜೆಕ್ಟ್ ತೆಗೆದುಕೊಂಡರೆ ಸ್ಥಳೀಯ ಅಧಿಕಾರಿಗಳು ರೈತರನ್ನು ಸುಲಿದುಬಿಡುತ್ತಾರೆ ಜನಗಳಿಗೆ ತೊಂದರೆಯಾಗುತ್ತದೆ ಎಂಬ ಭಾವನೆ ಏತಕ್ಕೆ ನಮ್ಮ ಸದಸ್ಯರಲ್ಲಿ ಮೂಡಿದೆಯೋ ನನಗಂತೂ ಅರ್ಥವಾಗುವುದಿಲ್ಲ. ರೀಜನಬಲ್ ರೇಟ್ ಹಾಕಿ ಎಂದು ಹೇಳುತ್ತೇವೆಯೇ ವಿನಾ, ಅನ್ ರೀಜನಬಲ್ ರೇಟನ್ನು ಸರ್ಕಾರದವರು ಏತಕ್ಕೆ ಹಾಕುತ್ತಾರೆ? ರೈತರನ್ನು ಕಂಡರೆ ಸರ್ಕಾರದವರಿಗೆ ಹೊಟ್ಟೆಕಿಚ್ಚೇ, ಏತಕ್ಕೆ ಹೀಗೆ ಹೇಳುತ್ತಾರೋ ನನಗಂತೂ ಅರ್ಥವಾಗುವುದಿಲ್ಲ.

(ಶ್ರೀ ಹೆಚ್. ಕೆ. ವೀರಣ್ಣ ಗೌಡ)

ಮನಸ್ಸಿಗೆ ಬಂದಹಾಗೆ ವಾಟರ್‌ರೇಟನ್ನು ಹಾಕುವುದಕ್ಕಾಗುವುದಿಲ್ಲ. ರೈತರ ಮಕ್ಕಳನ್ನು ಅಧೋಗತಿಗಳಿಗೆ ಇಳಿಸುತ್ತಾರೆ ಎಂದು ಹೇಳಿದರು. ಆ ರೀತಿ ಭಾವನೆ ಮಾಡಕೂಡದು. ವೈಯುಕ್ತಿಕವಾದ, ಇಷ್ಟ ಇಲ್ಲದೆ ಇದ್ದರೂ ಕಾನೂನನ್ನು ಅನುಸರಿಸಿ ಮಾಡಿದರೆ ಒಪ್ಪಿಕೊಳ್ಳ ಬೇಕಾಗುತ್ತದೆ. ಅದರಲ್ಲಿ ಬೇಕಾದರೆ ಬಾಕಿ ಸ್ನೇಹಿತರನ್ನು ಒಪ್ಪಿಸಿ ತಿದ್ದುಪಡಿ ಮಾಡ ಬೇಕಾಗುತ್ತದೆ. ಅಧಿಕಾರಿಗಳು ಇದ್ದಾರೆ ಕ್ಯಾಬಿನೆಟ್ ಇದೆ. ಇವರೆಲ್ಲಾ ಒಪ್ಪಬೇಕು. ಒಬ್ಬ ವ್ಯಕ್ತಿ ಬಂದು ಏನಾದರೂ ಮಾಡಬೇಕು ಎಂದರೆ ಆಗುವುದಿಲ್ಲ. ಇದು ಹುಚ್ಚು ದರ್ಬಾರು ಆಗುತ್ತದೆ ಹಾಗೆಲ್ಲಾ ಸರ್ಕಾರ ನಡೆಯುತ್ತು ಎಂದರೆ, ಆಕ್ಷೇಪಣೆ ಮಾಡಿ ರೈತರನ್ನು ಹಾಳು ಮಾಡುವುದಕ್ಕೆ ಈ ಮಸೂದೆಯನ್ನು ತಂದಿದ್ದಾರೆಂದು ಸಾರ್ವಜನಿಕರ ಗಮನಕ್ಕೆ ಬಂದರೆ ಈ ಸರ್ಕಾರಕ್ಕೆ ದುರುದ್ದೇಶ ಆರೋಪಣೆ ಮಾಡುವುದಿಲ್ಲವೇ ? ಇಲ್ಲದೆ ಇರುವ ಮಾತನ್ನು ಊಹೆ ಮಾಡಿಕೊಂಡು ಹೇಳಿದರೆ ಜನಗಳಿಗೆ ಭಯ ಹುಟ್ಟು ಗಾಬರಿ ಆಗುವ ರೀತಿಯಲ್ಲಿ ಮಾತನಾಡುವುದು ನನಗಂತೂ ಏನೇನು ಅರ್ಥವಾಗುವುದಿಲ್ಲ. ಮತ್ತೆ ಕೆಲವರು ಹೇಳಿದರು ಬರಗಾಲ ಪ್ರದೇಶದಲ್ಲಿ, ನೀರು ಕಡಿಮೆ ಆಗಿರುವಕಡೆ ಒಂದು ಪರ್ಸೆಂಟೂ ಕೆಲಸ ನಡೆದಿಲ್ಲ ಎಂದು. ನಾನು ನನ್ನ ಬೆನ್ನು ತಟ್ಟಿಕೊಳ್ಳುವುದಿಲ್ಲ. ಅರ್ಧ ಪರ್ಸೆಂಟ್ ರಿಟರ್ನ್ ಇದ್ದರೂ ಪ್ರೊಡಕ್ಟಿವ್ ವರ್ಕ್ ಆಗಿ ತೆಗೆದು ಕೊಳ್ಳಬಹುದು ಎಂದು ಮಾಡಿದ್ದೇವೆ. ಎರಡು ರೂಪಾಯಿ ರಿಟರ್ನ್ ಬರಲಿ, ಅಥವಾ ಒಂದು ರೂಪಾಯಿ ರಿಟರ್ನ್ ಬರಲಿ, ಅಥವಾ ಒಂದು ರೂಪಾಯಿ ಬಾರದೆ ಇದ್ದರೂ, ಅದು ಅಗತ್ಯವಾಗಿ ಆಗಬೇಕಾದರೆ ಜನಗಳಿಗೆ ಅನುಕೂಲ ಆಗಬೇಕಾದರೆ ಕೆಲವು ಸಮಯದಲ್ಲಿ ರೈತರು ಕೂಡ ಬೇಕಾದ್ದನ್ನು ಮನ್ನ ಮಾಡಿ ಕಾರ್ಯವನ್ನು ಕೈಗೊಂಡಿದ್ದೇವೆ, ಎಂದು ಈ ಸಭಾ ಸದಸ್ಯರ ಗಮನಕ್ಕೆ ತರಬೇಕಂದಿದ್ದೇನೆ.

5-00 P.M.

ಶ್ರೀಮಾನ್ ಕೊಥಾವಳೆ ಮತ್ತು ಪಂಚಗಾವಿ ಅವರು ವಾಟರ್ ರೇಟ್ ಒಂದೇ ಸಮನಾಗಿ ಇರಲಿ ವ್ಯತ್ಯಾಸ ಮಾಡಬೇಡಿ ಎಂದು ಹೇಳಿದರು, ಎಲ್ಲಿತನಕ ಇದು ಅನ್ವಯಿಸು ತ್ತದೆ ಎಂದರೆ ಇದುವರೆಗೂ ತರೀ ಅನ್ನಿಸಿಕೊಂಡಿದ್ದ ಜಮೀನಿಗೆ ಕೆಲವು ಸಂದರ್ಭಗಳಲ್ಲಿ ತರೀ ಕಂದಾಯ ಸ್ವಲ್ಪ ಹೆಚ್ಚು ಮಾಡಬೇಕಾಗುತ್ತದೆ. ಅದಕ್ಕೆ ಅವಕಾಶವಿರಬೇಕು ಅಷ್ಟೇ. ಮೈಸೂರು ಸಂಸ್ಥಾನದಲ್ಲಿ ಸಾರ್ವತ್ರಿಕವಾಗಿ ಹೆಚ್ಚು ಮಾಡುವುದಾಗಲೀ ಕಡಿಮೆ ಮಾಡುವುದಾ ಗಲೀ ಆ ಪ್ರಶ್ನೆ ಇದರಲ್ಲಿ ಇಲ್ಲ. ಶ್ರೀಮಾನ್ ನರಸಿಂಹೇಶ್ವರರವರು Kothavale is threatining to step up water rate to the extent of 120 Rupees per acre ಎನ್ನುವ ಅರ್ಥದಲ್ಲಿ ಹೇಳಿದರು. ವಾಟರ್ ರೇಟ್ ಹೆಚ್ಚು ಕಮ್ಮಿ ಮಾಡುವುದು ಯಥೋಚಿತವಾಗಿ ಮಾಡುವುದು ಆ ಸಂಬಂಧದಲ್ಲಿ ಇದು ಬಂದಿಲ್ಲ. ಎಲ್ಲ ತರೀ ಕಂದಾಯ ಕರಾವಾಗಿದೆಯೋ ಆ ಜಮೀನಿಗೆ ಸಂದರ್ಭ ಬಂದರೆ ವಾಟರ್ ರೇಟ್ ಹೆಚ್ಚು ಮಾಡುವುದಕ್ಕೆ ಅವಕಾಶವಿರಬೇಕು, ಒಂದು ಉದಾಹರಣೆ ಕೊಡುವುದಾದರೆ ವಿಶ್ವೇಶ್ವರಯ್ಯ ನಾಲೆಯ ಕೆಳಗೆ ಸಣ್ಣ ದೊಡ್ಡ ಕರೆಗಳು ಬೇಕಾದಷ್ಟಿವೆ, ಮದ್ದೂರು ಕೆರೆ ಬಹಳ ದೊಡ್ಡ ಕೆರೆ ಹಾಗೆಯೇ ಸೂಳೇ ಕೆರೆಯೂ ಬಹಳ ದೊಡ್ಡ ಕೆರೆ. ಕೃಷ್ಣರಾಜಸಾಗರ ಕಟ್ಟಿದ ಮೇಲೆ, ವಿಶ್ವೇಶ್ವರಯ್ಯ ನಾಲೆಯಿಂದ ನೀರು ಕೊಟ್ಟಾಗ ಆ ಸಂದರ್ಭದಲ್ಲಿ ತರೀ ಕರಾವಾಗಿದ್ದ ಜಮೀನಿಗೂ ತರೀ ಕಂದಾಯ ಹೆಚ್ಚು ಮಾಡಿದರು. ಮದ್ದೂರು ಕರೆಗೆ ವಿಶ್ವೇಶ್ವರಯ್ಯ ನಾಲೆ ಬರುವುದಕ್ಕೆ ಮೊದಲೇ ಒಂದು ಫೀಡರ್ ಚಾನಲ್ ಹಾಕಿದ್ದರು, ಅದಕ್ಕೆ 14 ಅಥವಾ 15 ಇತ್ತು ಎಕರೆಗೆ 2 ರೂಪಾಯಿ ಹೆಚ್ಚು ಮಾಡಿದರು ಏಕೆ ? ಫೀಡರ್ ಚಾನಲ್ ಇವನ್ನಾಗಿಯ್ಯ ಮೇಲಿನಿಂದ ಜಮೀನಿಗೆ ಬರತಕ್ಕ ಸೀಪೇಜ್ ವಾಟರ್ ಒಂದ ಎಂದರೂ ಬರುತ್ತದ ಕೆರೆ ತುಂಬ ಬೇಸಗೆಯಲ್ಲಿ ಒಣಗುವುದಿಲ್ಲ. ಆದ್ದರಿಂದ

ಮದ್ದೂರು ಕೆರೆ ಕೆಳಗೆ ಎರಡು ರೂಪಾಯಿ ಕೊಟ್ಟರೆ ಸಾಕು ಎಂದು ಆಯಿತು. ಅದೇ ನೊಳೇ ಕೆರೆಗೆ ಫೀಡರ್ ಚಾನಲ್ ಮಾಡಿರಲಿಲ್ಲ. ಆದ್ದರಿಂದ ಸೀವೇಜ್ ವಾಟರ್ ಮಳೆಗಾಲ ಹಾಗೂ ಬೇಸಗೆಯಲ್ಲಿ ತುಂಬಿದರೂ 6 ರೂಪಾಯಿ ಇದ್ದುದನ್ನು 7 ಅಥವಾ 8 ರೂಪಾಯಿ ಮಾಡಿದರು. ಎಲ್ಲಿ ಕೆರೆ ಇದ್ದು ಮಳೆ ಬಂದರೆ ಉಂಟು ಇಲ್ಲವೇ ಇದ್ದರೆ ಕೆರೆ ಕೆಳಗಿನ ಜಮೀನಿನಲ್ಲಿ ಅರ್ಧಂಬರ್ಧ ಬೆಳೆ ಆಗುತ್ತದೆ ಅಂಥ ಕಡೆ ನೀರಾವರೀ ಕಾಂಗಾರಿ ಆಗಿ ಸೀಪೇಜ್ ವಾಟರ್ ಬೇಡಿ ಎಂದರೂ ತುಂಬಿ ಆ ಕೆರೆಗೆ ಅಬ್ಯಾರ್ಡ್ ವಾಟರ್ ಸಪ್ಲೈ ಆದರೆ ಒಂದು ಬೆಳೆ ಆಗುವರೆಗೆ 2 ಬೆಳೆ ಆದರೆ 6 ರೂಪಾಯಿ ಇದ್ದ ಕಡೆ 8 ಅಥವಾ 9 ರೂಪಾಯಿ ಮಾಡುವುದಕ್ಕೆ ಅವಕಾಶವಿರಲಿ ಎಂಬುದು ಈ ಸೆಕ್ಷನ್ 10ರ ಉದ್ದೇಶವೇ ಹೊರತು ಸಾರ್ವತ್ರಿಕವಾಗಿ ಈಗಿ ಎವ ತರೀ ಕಂದಾಯ ಮತ್ತೆ ಹೆಚ್ಚುಮಾಡುತ್ತೇವೆ ಎನ್ನುವ ಭಾವನೆ ಸರಿಯಲ್ಲ ಎಂದು ಈ ಸಂದರ್ಭದಲ್ಲಿ ಅರಿಕೆ ಮಾಡಿ ಕೊಳ್ಳುತ್ತೇನೆ. ಅಂಥಾ ಭಾವನೆ ಸದಸ್ಯರ ಮನಸ್ಸಿನಲ್ಲಿ ಬರುವುದಕ್ಕೆ ಏನು ಕಾರಣವೋ ನನಗಂತೂ ಅರ್ಥವಾಗುವುದಿಲ್ಲ. ಕಂದಾಯ ಮೊದಲು ನಿಗದಿ ಮಾಡಿದಷ್ಟೇ ತೆಗೆದುಕೊಳ್ಳಬೇಕು ಎಂದ ಹಾಗೆ ಜ್ಞಾಪಕಕ್ಕೆ ಬಂತು. "ಭಗ ಕೊಟ್ಟೇ ತೀರಬೇಕು" "pound of flesh" ಎಂದು ನಾಟಕದಲ್ಲಿ ಹೇಳುತ್ತಾರೆಯಲ್ಲಾ ಆ ತರಹ ಮನಸ್ಸಿನಲ್ಲಿಟ್ಟುಕೊಂಡು ಮಾಡುತ್ತಾ ಇದ್ದಾರೆ ಎನ್ನುವ ಅರ್ಥ ಬರುವ ರೀತಿಯಲ್ಲಿ ವಾದ ಮಾಡಿದ್ದಾರೆ. ಅದು ನಿಜವಲ್ಲ, ಆ ರೀತಿ ಮಾಡುವುದಿಲ್ಲ. ಎಲ್ಲಿ ನಮಗೆ ಲಾಭದಾಯಕವಾಗಿಲ್ಲ ಅದನ್ನು ತೆಗೆದುಕೊಳ್ಳಬೇಕಾಗಿಲ್ಲ; ವಜಾ ಮಾಡಬಹುದು. ಎನ್ನುವ ಆಕ್ಷೇಪಣೆಗೆ ಬರದೆ ಇರುವಷ್ಟು ಮಟ್ಟಿಗೆ ಮಾತ್ರ ಎಲ್ಲಾ ಅಂಶವನ್ನು ಆಲೋಚನೆ ಮಾಡಿ ಬೆಟರ್‌ಮೆಂಟ್ ಲೆವೀ ಹಾಕುತ್ತಾರೆ ಮತ್ತು ಎಲ್ಲಾ ಕಡೆಯಲ್ಲೂ ವಾಟರ್ ರೇಟ್ ಹೆಚ್ಚು ಮಾಡುವುದಿಲ್ಲ. ಹೊಸದಾಗಿ ಮಾಡತಕ್ಕ ನೀರಾವರಿ ಆಸರೆಯಿಂದ ಸಣ್ಣ ಪುಟ್ಟ ಕೆರೆಗಳಿಗೆ ಯಾವುದಕ್ಕೆ ಅನಾನುಕೂಲವಾಗುತ್ತದೆಯೋ ಅಂಥಾ ಕಡೆ 2 ಅಥವಾ 3 ರೂಪಾಯಿ ಹೆಚ್ಚು ಮಾಡುವುದಕ್ಕೆ ಅವಕಾಶವಿರಲಿ ಎಂಬ ದೃಷ್ಟಿಯಿಂದ ಮಾತ್ರವೆ ಹೊರತು ಈಗಿರತಕ್ಕ ಕೆಲಸಕ್ಕೆ ಅಲ್ಲವೇ ಅಲ್ಲ. ಹೊಸದಾಗಿ ಆಗಬೇಕಾದ ಕೆಲಸಕ್ಕೆ ಅದು ಎಷ್ಟುಮಟ್ಟಿಗೆ ಯಾವ ಪ್ರಕಾರ ಏನಾಗುತ್ತದೆ ಎಂದು ಊಹೆ ಮಾಡುವುದಕ್ಕಾಗುವುದಿಲ್ಲ ಕೆಲವು ಸ್ನೇಹಿತರು ಆದಾಯ ಏನು ಬರುತ್ತದೆ, ಫೈನಾನ್ಷಿಯಲ್ ಸ್ಟೇಟ್‌ಮೆಂಟ್ ಏಕೆ ಕೊಟ್ಟಿಲ್ಲ ಎಷ್ಟು ಕಂದಾಯ ಆಗುತ್ತದೆ ಎಂದು ಕೇಳಿದರು. ಇದು ಊಹೆ ಮಾಡಲಿಕ್ಕೆ ಎಂದಾದರೂ ಸಾಧ್ಯವೆ ? ಎಷ್ಟು ಕೆರೆ, ಎಷ್ಟು ನಾಲೆ, ಎಷ್ಟು ಪಿಕ್‌ಅಪ್‌ಗಳನ್ನು ಹಾಕುತ್ತೇವೆ ಎಂಬ ಪ್ರೋಗ್ರಾಂ ಇದೆ. ಪ್ಲಾನ್ ಪ್ರಕಾರ ಕಟ್ಟಿದಾಗ ತಾನೇ ಕೆಲಸ ಆಯಿತು ಎಂದು ಭಾವಿಸುವುದು ಆದ್ದರಿಂದ ಊಹೆ ಮಾಡಿಕೊಂಡು ಫೈನಾನ್ಷಿಯಲ್ ಸ್ಟೇಟ್‌ಮೆಂಟ್ ಕೊಡಬೇಕೆಂದು ನಿರೀಕ್ಷಣೆ ಮಾಡುವುದು ಸಹ ಅರ್ಥವಾಗದ ಮಾತು.

ಇನ್ನೊಂದು ವಿಷಯ ಹೇಳಿದರು ಪಿಕ್‌ಅಪ್ ಹಾಕಿದರೆ ಮತ್ತೆ ಕಂದಾಯ ಹೆಚ್ಚಿಸುತ್ತಾರೆ ಎಂದು ಹಾಗಲ್ಲ ದೇವರು ! ವಿಶ್ವೇಶ್ವರಯ್ಯ ನಾಲೆ ತೆಗೆದುಕೊಳ್ಳೋಣ ಒಂದು ಸಾರಿ ಹೆಚ್ಚಿ ಸಿದ್ದಾಯಿತು. ಮದ್ದೂರು ಕೆರೆ ಕೆಳಗೆ 2 ರೂಪಾಯಿ ಹೆಚ್ಚಿಸಿದ್ದಾಯಿತು; 2—3 ವರ್ಷದ ಹಿಂದೆ 200 ಪಿಕ್‌ಅಪ್‌ಗಳು ಇದ್ದವು ಈಗ 300 ಪಿಕ್‌ಅಪ್‌ಗಳನ್ನು ಹಾಕಿದ್ದಾರೆ ನೀರು ಹಳ್ಳಕ್ಕೆ ಹರಿಯುತ್ತದೆ. ಅಲ್ಲಿ ಅಡ್ಡ ಕಟ್ಟೆ ಹಾಕಿ ಆ ನೀರನ್ನು ಮತ್ತೊಂದು ಬೇರೆ ಪ್ರದೇಶಕ್ಕೆ ಹೋಗುವಂತೆ ಮಾಡಿ ಅಲ್ಲಿ ಉಪಯೋಗವಾದರೆ ಮತ್ತೆ 2 ರೂಪಾಯಿ 4 ರೂಪಾಯಿ ಜಾಸ್ತಿ ಮಾಡುವುದಿಲ್ಲ. ಇರತಕ್ಕ ನೀರನ್ನು ಬಹುಪ್ರೋತ್ಸಾಹಗಿ ಉಪಯೋಗಿಸಿಕೊಂಡು ಹಳ್ಳಕ್ಕೆ ಹೋಗುತ್ತಾ ಇದ್ದುದನ್ನು ನದಿಗೆ ಹೋಗಿ ಬೀಳುತ್ತಾ ಇದ್ದುದನ್ನು ಅಲ್ಲಲ್ಲೇ ತಡೆಹಾಕಿ ಅದರ ಕೆಳಗಿರತಕ್ಕ ಜಮೀನಿಗೆ ಸಾಕಾದಷ್ಟು ನೀರು ದೊರೆಯಬೇಕೆಂಬ ಉದ್ದೇಶದಿಂದ 300 ಪಿಕ್‌ಅಪ್‌ಗಳನ್ನು ಹಾಕುತ್ತಾರೆ. ಅದಕ್ಕೆ ಬೇರೆ ಕಂದಾಯ ಹಾಕುತ್ತಿಲ್ಲ. ಎಂಬುದನ್ನು ಸ್ನೇಹಿತರು ತಿಳಿದುಕೊಳ್ಳಬೇಕು. ಇಂಪ್ರೂವ್‌ಮೆಂಟ್ ಮಾಡಿದ ಕೂಡಲೇ ಮತ್ತೆ 2 ರೂಪಾಯಿ ಏರಿಸುತ್ತಾರೆ ಎಂಬ ಭಾವನೆ ಇದೆ ಅದು ಸರಿಯಲ್ಲ ಎಂದು ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

(ಶ್ರೀ ಹೆಚ್. ಕೆ. ವೀರಣ್ಣಗೌಡ)

ಶ್ರೀಮಾನ್ ಮುಕ್ಕಣ್ಣಪ್ಪನವರು ಭಯ, ಭ್ರಾಂತಿ ಉಂಟು ಮಾಡಿದ್ದೀರಿ ಎಂದು ಹೇಳಿದರು. ಭಯವನ್ನುಂಟು ಮಾಡಿದ್ದೀರಿ ಎಂಬುದನ್ನು ಒಪ್ಪಿಕೊಳ್ಳದಿದ್ದರೂ ಅವರಿಗೆ ಭ್ರಾಂತಿಯಂತೂ ಆಗಿದೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಸರಿಯಾದ ಅರ್ಥ ವ್ಯಾಪ್ತಿ ಎಷ್ಟರಮಟ್ಟಿಗಿದೆ ಎಂಬುದನ್ನು ತಿಳಿದುಕೊಳ್ಳದೆ ಭ್ರಾಂತಿಪಟ್ಟು ಮಾತನಾಡಿ ಜನರಲ್ಲಿ ಭಯವನ್ನುಂಟು ಮಾಡತಕ್ಕ ಪ್ರಯತ್ನ ಮಾಡಿದೆ ಅದು ನಿಜವಾಗಿಯೂ ಸರಿಯಾದುದಲ್ಲ. ಎಂದು ತಮ್ಮಲ್ಲಿ ಅತಿ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ. ಅಂಥಾ ಪರಿಸ್ಥಿತಿಯೂ ಇಲ್ಲ ಎಂದು ಹೇಳುತ್ತಾ ಇದ್ದೇನೆ. ಇಂಪ್ರೂವ್ ಮಾಡಿದಾಕ್ಷಣಕ್ಕೇ ಕಂದಾಯ ಹಾಕುತ್ತಾರೆ ಎನ್ನುವುದು ಸರಿಯಲ್ಲ. Substancial improvement ಮಾಡಿದರೆ ಬೆಟರ್‌ಮೆಂಟ ರೇಟ್ ಹೆಚ್ಚು ಮಾಡುವುದಕ್ಕೆ ಅವಕಾಶವಿದೆಯೇ ಹೊರತು ನನ್ನ ಅನುಭವದಲ್ಲಿ ಸಾಮಾನ್ಯವಾದಂಥ ನಾಲಾ ರಿಪೇರಿ ಕೆರೆ ಒಡ್ಡು ಕಟ್ಟುವುದು ಇಂಥಾದ್ದಕ್ಕೆಲ್ಲಾ ಬೆಟರ್‌ಮೆಂಟ್ ಲೆವೀ ಹಾಕುವುದಿಲ್ಲ. ಅಜಗಜಾಂತರ ವ್ಯತ್ಯಾಸವಾದರೆ ಯಾವುದಾದರೂ ಪ್ರಾಜೆಕ್ಟ್ ಆಗಿದ್ದರೆ ಅದರ ಕೆಳಗೆ ಸ್ವಲ್ಪ ಹಣ ಹೆಚ್ಚು ಕೇಳುವುದು ಇದೆಯೇ ಹೊರತು ಬಾಕಿಯಾದ್ದಕ್ಕೆ ಅವಕಾಶವಿಲ್ಲ ಎನ್ನುವುದನ್ನು ಈ ಸಭೆಯಲ್ಲಿ ಭರವಸೆ ಕೊಡುವುದಕ್ಕೆ ಮನಸ್ಸುಳ್ಳವನಾಗಿದ್ದೇನೆ.

ಮತ್ತೆ ಕೆಲವು ಸ್ನೇಹಿತರು ಹೇಳಿದರು ರೈತರಿಗೆ ಇದನ್ನು ಕೊಟ್ಟರೆ ಬಹಳ ನಷ್ಟವಾಗುತ್ತದೆ ಎಂದು ಇನ್ನು ಕೆಲವು ಸ್ನೇಹಿತರು ಜಮೀನಿನ ಬೆಲೆ ಎಷ್ಟಾಗುತ್ತೋ ಅಷ್ಟನ್ನು ವಸೂಲು ಮಾಡುವುದಕ್ಕಾಗಿ ಇದನ್ನು ತಂದಿದ್ದಾರೆ ಎಂದರು. ಈ ಸಂದರ್ಭದಲ್ಲಿ ಒಂದು ವಿಚಾರ ಜ್ಞಾಪಕಕ್ಕೆ ಬರುತ್ತದೆ. ನಾಲ್ಕು ಜನ ಕುರುಡರಿದ್ದರಂತೆ ಅವರ ಮುಂದೆ ಒಂದು ಆನೆಯನ್ನು ತಂದು ನಿಲ್ಲಿಸಿದಾಗ ಒಬ್ಬರು ಸೊಂಡಲನ್ನೇ ಆನೆಯೆಂದು ಹೇಳಿದರು. ಇನ್ನೊಬ್ಬರು ಆನೆಯ ಕಾಲನ್ನು ನೋಡಿ ಅದನ್ನೆ ಆನೆ ಎಂದರು. ಹೀಗೆ ಆನೆಯ ಸೊಂಡಿಲನ್ನೇ ಆನೆಯಂತೆ ಭಾವಿಸಿದ ಹಾಗೆ ಇಲ್ಲಿರುವ ವಾಕ್ಯಗಳನ್ನೇ ನೋಡಿಕೊಂಡು ಹೇಳುವುದು ಸರಿಯಾಗಿಲ್ಲ. ಇದರ ಉದ್ದೇಶ ಮುಖ್ಯವಾಗಿ ಟೆಕ್ನಿಕಲ್ ಕಾರಣಗಳಿ [illegible]ವಾಗಿ ಈಗಾಗಲೇ ಆಗುತ್ತಿರುವ ಕಾರ್ಯಗಳು ನಿಂತು ಹೋಗುತ್ತದೆ, ಆದರಿಂದ ಅಂತಹ ಆಗಬೇಕಾದ ಕೆಲಸ ಕಾರ್ಯಗಳನ್ನು ನಿಂತು ಹೋಗುವಂತೆ ಮಾಡಬಾರದು ಎನ್ನುವುದು ಇದರ ಮೊದಲನೆಯ ಉದ್ದೇಶ. ಇನ್‌ಸಿಡೆಂಟಲ್ ಆಗಿ ಸರಕಾರಕ್ಕೆ ಹಣ ಬರುತ್ತದೆ. ಮುಖ್ಯವಾಗಿ ಜನಕ್ಕೆ ಅನುಕೂಲವಾಗಿ ಕೊಡಬೇಕು. ಇನ್ನೂ ಮುಂದಕ್ಕೆ ನೀರಾವರಿ ಕಾಮಗಾರಿಗಳನ್ನು ನಡೆಸಬೇಕು ಎನ್ನುವುದು ಸರಕಾರದ ಸಾಮಾನ್ಯ ನೀತಿ ಮತ್ತು ತತ್ವ. ಇದಕ್ಕೆ ವಿರೋಧ ಬಾರದ ರೀತಿಯಲ್ಲಿ ಈ ಸಭೆಯ ಸದಸ್ಯರೆಲ್ಲರೂ ಒಪ್ಪುವಂತೆ ಇದನ್ನು ಮಾಡುವುದು ಧರ್ಮ. ಹತ್ತಾರು ಕಡೆಗಳಲ್ಲಿ ಮಾಡಬೇಕಾದ ಕೆಲಸಗಳು ನಿಂತು ಹೋಗುವಾಗ ಸ್ವಲ್ಪ ಹೆಚ್ಚು ಹಣ ಕೊಡಬೇಕಾಗಬಹುದು. ಇದರಿಂದ ಅನೇಕ ಜನಗಳಿಗೆ ಅನುಕೂಲವಾಡಿಕೊಡಬಹುದು. ಈ ದೃಷ್ಟಿಯಿಂದ ಈ ಮಸೂದೆಯ ತಿದ್ದುಪಡಿಯನ್ನು ತಂದಿದ್ದೇವೆಯೇ ಹೊರತು ಹಣವನ್ನು ಸಂಪಾದನೆ ಮಾಡುವುದಕ್ಕೋಸ್ಕರ ಅಲ್ಲ. ಸರಕಾರದವರಿಗೆ ಇದರಲ್ಲಿ ದುಡ್ಡು ಬರುತ್ತದೆ. ರೈತರಿಗೂ ಅನುಕೂಲವಾಗುತ್ತದೆ. ಎಲ್ಲಿ ಆಗುತ್ತದೆ, ಇದರಿಂದ ಶೇಕಡಾ ನೂರರಷ್ಟು ಬರುವುದಿಲ್ಲ. ಶೇಕಡಾ ಎರಡರಷ್ಟು ಹಾಕಬಾರದು ಎಂದರೆ ಸರಿಯಲ್ಲ. ಸ್ವಲ್ಪ ಹೆಚ್ಚಿಗೆ ಬೆಟರ್‌ಮೆಂಟು ಲೆವಿಯನ್ನು ಹಾಕಿದರೆ ಅನುಕೂಲವಾಗುತ್ತದೆ ಎಂದು ಒಂದೆರಡು ರೂಪಾಯಿಗಳಷ್ಟು ಹೆಚ್ಚು ಮಾಡಲಾಗಿದೆ. ಮಳೆಯಿಂದ ಬೆಳೆ ಬಾರದೆ ನಷ್ಟವಾಯಿತು. ಹಸರು ಗೊಬ್ಬರಕ್ಕಾಗಿ ಹಾಕಿದ ಎಲೆಗಳನ್ನೆಲ್ಲಾ ದನಗಳೇ ಮೇದು ಬಿಟ್ಟು ಫಸಲಾಗಲಿಲ್ಲ. ಎಂದು ಹೇಳಿದರೆ ಹೇಗೆ? ತರೀ ಕಂದಾಯ ತಮಗೆಲ್ಲಾ ತಿಳಿದ ಹಾಗೆ ಶೇಕಡಾ ನಾಲ್ಕರಷ್ಟಿದೆ. ಈ ಕಂದಾಯದ ಮೇಲೆ ಒಂದು ಅಥವಾ ಎರಡು ರೂಪಾಯಿಗಳಷ್ಟು ಹೆಚ್ಚು ಮಾಡಿದರೆ ಕಷ್ಟವಾಗುತ್ತದೆಯೇ? ರೈತರಿಗೆ ಇದರಿಂದೇನೂ ಕಷ್ಟವಿಲ್ಲ. Practical aspect of the

question ನೋಡಿ ತಮ್ಮಲ್ಲಿ ಅನೇಕರು ಕಷ್ಟಪಟ್ಟು ಕೆಲಸ ಮಾಡುವ ರೈತರಾಗಿರಬಹುದು. ಆದರೆ ಶ್ರೀ ಮುಕ್ಕಣ್ಣಪ್ಪನವರು ಹೇಳಿದಂತೆ ರೈತರು ಭಯದಿಂದ ಹೆದರುತ್ತಾರೋ ಎನ್ನುವ ಕಾರಣವೇನಲ್ಲ. ನ್ಯೂನತೆಗಳಿದ್ದರೆ ರೈತರಿಗೆ ಅನುಕೂಲಮಾಡಿ ಕೊಡಬೇಕಾದವರು ಸರಕಾರದವರು. ಸರಕಾರ ಎಂದರೆ ಪ್ರಜಾಪ್ರಭುತ್ವದಲ್ಲಿ ನಂಬಿಕೊಂಡಿರುವವರು. ವ್ಯಕ್ತಿ ಮುಖ್ಯವಲ್ಲ. ಇದು ಬಹು ಜನ ಸೇರಿ ಮಾಡಬೇಕಾದದ್ದು. ಇಂತಹ ಕಾರ್ಯವನ್ನು ಯಾರೇ ಇರಲಿ, ಎಲ್ಲಿಯವರೇ ಉಪಯೋಗಿಸಲಿ, ಜನಗಳಿಗೆ ತೊಂದರೆ ಉಂಟು ಮಾಡಿ ಭಯ ಭ್ರಾಂತಿಯನ್ನು ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದಂತೆ ತರಬೇಕಾಗಿಲ್ಲ ಎಂದು ನಾನು ಅವರಿಗೆ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನೊಂದು ಆಕ್ಷೇಪಣೆಯನ್ನು ಶ್ರೀಮಾನ್ ಮಲ್ಲಾರಾಧ್ಯರವರು ರೂಲ್ಸ್‌ನಲ್ಲಿ ಹೇಳಿದರು. ಕಾರಣ ಇಷ್ಟೇ ಕೆಲವು ಕಾಮಗಾರಿಗಳನ್ನು ನಮ್ಮ ದೇಶದ ಭಾಗದಲ್ಲಿ ಇತರ ದೇಶದ ಕಾಮಗಾರಿಗಳ ಜೊತೆಯಲ್ಲಿ ಮಾಡುವಾಗ ಇಂತಹ ಕಷ್ಟಗಳು ಬರುತ್ತವೆ. ಆಗ ಸ್ಪೆಷಲ್ ಆದ ರೂಲ್ಸ್‌ಗಳು ಬೇಕು. ಆದಕ್ಕೆ ಮಾತ್ರ ಅನ್ವಯ ಮಾಡುವುದಕ್ಕೆ ಇಲ್ಲಿದೆಯೇ ಹೊರತು ಅನ್ಯಥಾ ಇಲ್ಲ. ಅಲ್ಲದೆ ಪ್ರೆಸಿಡೆಂಟರವರ ಬಳಿಗೆ ನೀವೇಕೆ ಹೋಗುತ್ತೀರಿ ಎಂದರು. ಹೀಗೆ ತೆಗೆದುಕೊಂಡು ಹೋಗುವುದು ನಮ್ಮ ಹಕ್ಕಲ್ಲ. ತುಂಗಭದ್ರಾ ಅಣೆಕಟ್ಟಿನ ಸಂಬಂಧವಲ್ಲಿ ಅಕ್ರಾಗಿರುವುದು ಪಾರ್ಲಿಮೆಂಟಿಗೆ ಅನ್ವಯಿಸುವಾಗ ಆಂಧ್ರ ದೇಶಕ್ಕೂ ಅನ್ವಯಿಸಿದ್ದಾರೆ. ಇಂತಹ ಸಂದರ್ಭದಲ್ಲಿ ಇನ್ನೂ ಏನಾದರೂ ಹಣಕಾಸಿನ ವಿಚಾರದಲ್ಲಿ ಹೆಚ್ಚು ಕಡಿಮೆ ಬಂದರೆ ನಾವು ಪ್ರೆಸಿಡೆಂಟ್‌ರವರ ಅಸ್ಸೆಂಟನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ಮಾತ್ರ ಇಲ್ಲಿ ಸೇರಿಸಬೇಕಾಯಿತು. ಇಲ್ಲದೇ ಇರತಕ್ಕ ಗೊಂದವೆಗೆ ಸಿಕ್ಕಿಕೊಳ್ಳಬೇಕೆನ್ನುವ ಮಾತಲ್ಲ. ಇಷ್ಟು ಮಾತನ್ನು ಹೇಳಿ ನಾನಾಗಲೇ ಕೊಟ್ಟಿರತಕ್ಕ ವಿವರಣೆಯನ್ನು ಮತ್ತು ಏನು ಭರವಸೆಯನ್ನು ಹೇಳಿದ್ದೇನೋ ಮತ್ತೆ ಪುನರುಚ್ಚಾರ ಮಾಡುತ್ತೇನೆ. ಇದರ ಮುಖ್ಯ ಉದ್ದೇಶ ಶೇಕಡಾ ಮೂರಕ್ಕಿಂತ ಕಡಿಮೆ ಇದ್ದರೆ ಕೆಲಸವನ್ನು ನಿಲ್ಲಿಸಬಾರದು. ಬೆಟರ್‌ಮೆಂಟ್ ಲೆವಿಯನ್ನು 500/- ರೂಪಾಯಿಗಳಿಗಿಂತ ಹೆಚ್ಚಿಗೆ ಮಾಗಬಾರದು ಎನ್ನುವ ನಿರ್ಬಂಧವನ್ನು ಕೆಲವರು 3,000 ದಿಂದ 4,000 ದವರೆಗೆ ತರಿಸಲು ಅವಕಾಶವಿದೆ ಎಂದರು. ಇಷ್ಟು ಮಟ್ಟಿಗೆ ಏರಿಸಿದಂತೆ ಸ್ವಲ್ಪ ಮಟ್ಟಿಗೆ ಇದುವರೆಗೆ ಹಾಕಿರುವ ಲೆವಿಯನ್ನು ಹೆಚ್ಚು ಮಾಡಿಕೊಂಡು ಹೆಚ್ಚು ಹೆಚ್ಚಾಗಿ ಕೆಲಸ ಕಾರ್ಯಗಳನ್ನು ಕೈಗೊಂಡು ಜನಕ್ಕೆ ಅನುಕೂಲಮಾಡಿ ಕೊಡಬೇಕು ಎಂದು ಸರಕಾರ ಈ ದೃಷ್ಟಿಯಿಂದ ತಂದಿದ್ದಾರೆ ಎನ್ನುವುದನ್ನು ಈ ಸಭೆಯ ಮಾನ್ಯಸದಸ್ಯರು ಮನವರಿಕೆ ಮಾಡಿಕೊಂಡು ಈ ಮಸೂದೆಗೆ ತಮ್ಮ ಅನುಮತಿ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—The question is:

"That the Mysore Irrigation (Levy of Betterment Contribution and Water Rate) Amendment Bill, 1960, be taken into consideration."

The motion was adopted.

Clauses

Mr. SPEAKER.—The question is:

"That clause 2 stand part of the Bill."

The motion was adopted.

(Mr. SPEAKER)

Clause 2 was added to the Bill.

Clause 3

Mr. SPEAKER.—Motion moved :

That clause 3 do stand part of the Bill.

Sri C. J. MUCKANNAPPA.—Sir, I beg to move the following amendment.

That After item (i), the following shall be inserted :

"In sub-section (1) the following proviso shall be added before the existing proviso :—

"Provided that the appellate authority may reduce or waive the payment of any instalment of the contribution on the ground that the prices of agricultural commodities have fallen steeply or on the applicant's economic condition."

Mr. SPEAKER.—Amendment moved :

"That After item (i), the following shall be inserted:

In sub-section (1) the following proviso shall be added before the existing proviso :

"Provided that the appellate authority may reduce or waive the payment of any instalment of the contribution on the ground that the prices of agricultural commodities have fallen steeply or on the applicant's economic condition."

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸ್ವಾಮಿ, ಈ ತಿದ್ದುಪಡಿಯನ್ನು ಏತಕ್ಕಾಗಿ ಸೂಚಿಸುತ್ತಿದ್ದೇನೆ ಎಂದರೆ, ತಮಗೆ ಗೊತ್ತಿರುವ ಹಾಗೆ ಹಿಂದೆ ಒಂದು ಸಾರಿ ಕೃಷ್ಣರಾಜ ಸಾಗರದಲ್ಲಿ ನೀರಿಲ್ಲದೆ ಬತ್ತಿಹೋಯಿತು. ಆಗ ಅಲ್ಲಿನ ಜನಗಳಿಗೆ ಯಾವುದೇ ತರಹದ ಒಂದು ಪರಿಹಾರವೂ ದೊರಕಲಿಲ್ಲ. ಈಗ ತಾವು ಹೊಸದಾಗಿ ಕಟ್ಟಿದ ಪ್ರಾಜೆಕ್ಟುಗಳ, ಕೆರೆಗಳ ಮೇಲೆ, ಅಲ್ಲಿ ಕೆರೆ ತುಂಬಿದೆ ಎಂದು ಹಾಕಿಬಿಟ್ಟು ಫಸಲೂ ಆಗದೇ ಫಸಲೆಲ್ಲಾ ಬತ್ತಿಹೋಗಿಬಿಟ್ಟರೆ, ಅಂತಹ ಜನಗಳ ಮೇಲೆ ಕಾಂಟ್ರಿಬ್ಯೂಷನ್ನನ್ನು ಹಾಕಿದರೆ ಎಷ್ಟರಮಟ್ಟಿಗೆ ಕಷ್ಟವಾಗುತ್ತದೆ ಎನ್ನುವುದನ್ನು ತಾವು ಸ್ವಲ್ಪ ಸುದೀರ್ಘವಾಗಿ ಯೋಚನೆ ಮಾಡಬೇಕು. ಈಗ ತಾವು ಹೇಳಿದಂತೆ ವ್ಯಂಗ್ಯವಾಗಿಯಾಗಲೀ, ಅಪಾರವಾದ ರೈತರಲ್ಲಿ ಪ್ರೇಮ ಇರುವ ತಮಗೆ ನನಗಿಂತ ಕಡಿಮೆ ಇದೆ ಎಂದು ನಾನು ಹೇಳಿಲ್ಲ. ನನಗಾವರೂ ರೈತರ ತಲೆಒಡೆಸು ಭಯ ಭ್ರಾಂತಿಯನ್ನುಂಟು ಮಾಡುವ ಮಾತುಗಳನ್ನು ಆದನೇಕೆಂದು ನನ್ನ ಮನಸ್ಸಿನಲ್ಲಿ ಸಲ್ಲಿಸಲಿಲ್ಲ ಎನ್ನುವುದನ್ನು ಈ ಸಭೆಯಲ್ಲಿ ಹೇಳುತ್ತೇನೆ. ಈ ದೇಶದಲ್ಲಿರುವ ಮಂತ್ರಿಗಳಾಗಿ ಈ ದೇಶದ ಸತ್ಪ್ರಜೆಯಾಗಿ ದೇಶದಲ್ಲಿರುವ ರೈತರ ಹಿತವನ್ನು ನೀವು ಸಂರಕ್ಷಿಸುತ್ತೀರೆಂಬ ಭರವಸೆ ನನಗೆ ಬಹುಮಟ್ಟಿಗೆ ಇದೆ. ಆ ಭರವಸೆ ಇಲ್ಲದೇ ಹೋಗಿದ್ದರೆ ಈ ಮಾತನ್ನು ಇಲ್ಲಿ ಆಡುತ್ತಿರಲಿಲ್ಲ. ಇದಕ್ಕೋಸ್ಕರವಾಗಿ ಹೊಸದಾಗಿ ಕಟ್ಟಿದಂತಹ ಕೆರೆಗಳು, ಹೊಸದಾಗಿರುವ ಚಾನಲ್ಲುಗಳು, ಹೊಸದಾಗಿರುವ ಪಿಕ್ ಅಪ್‌ಗಳು ಆಗಿ ಅವುಗಳಿಂದ ಬೇಕಾದ ಬೆಳೆಗಳು ಆಗಿ ನೂರಾರು ಪಲ್ಲದಷ್ಟು ಭತ್ತ ರಾಗಿ ಬೆಳೆಯಾಗಿ ಆಗ ಪಲ್ಲ ಒಂದಕ್ಕೆ ಮೂರು ರೂಪಾಯಿನಂತೆ ರಾಗಿ ಮತ್ತು ಭತ್ತವನ್ನು ಮಾರುವಂತೆ ಆದರೆ ಮತ್ತು ಎಂಟಾಣೆಯಂತೆ ಬೆಲ್ಲವನ್ನು ಮಾರುವಂತೆ ಆದರೆ ಆಗ ರೈತನ ಸ್ಥಿತಿ ಬಹಳ ಕೆಳ

ಮಟ್ಟಕ್ಕೆ ಹೋಗುವಾಗ ಅವನಿಂದ ಬೆಟರ್‌ಮೆಂಟು ಲೆವಿಯನ್ನು ಯಾವ ರೀತಿಯಾಗಿ ಕೊಡಬೇಕು. ಅಂತಹ ಪರಿಸ್ಥಿತಿ ಒದಗಿದಾಗ ಅವನಿಗೆ ಅನುಕೂಲ ಮಾಡಿಕೊಡಲು ಈ ಕಾನೂನಿನಲ್ಲಿ ವಿನಾಯತಿ (waive) ಕೊಡುವುದಕ್ಕೆ ಅಧಿಕಾರವಿರಬೇಕು ಎಂದು ತಿದ್ದುಪಡಿ ತಂದಿದ್ದೇನೆ. ಮಾನ್ಯ ರೆವಿನ್ಯೂ ಮಂತ್ರಿಗಳು ಹೇಳುವ ಹಾಗೆ ಎಲ್ಲಿಯಾದರೂ ಕ್ಷಾಮದ ಪರಿಸ್ಥಿತಿ ಬಂದರೆ ಅಲ್ಲಿ ಲ್ಯಾಂಡು ರೆವೆನ್ಯೂವನ್ನು ಸಸ್ಪೆಂಡು ಮಾಡಿ ಅದನ್ನು ಮುಂದಿನ ವರ್ಷ ವಸೂಲು ಮಾಡಬೇಕೆಂದು ಹೇಳುತ್ತಾರೆ. ಅದನ್ನು ನಾನು ಒಪ್ಪುವುದಿಲ್ಲ. ಬರಗಾಲ ವಿಪರೀತ ಬಂದಿದೆ, ಮಳೆ ಬಂದಿದೆ, ಆದರೂ ಸರಿಯಾಗಿ ಬೆಳೆಗಳನ್ನು ಬೆಳೆಯುತ್ತಿಲ್ಲ ಎನ್ನುವುದನ್ನು ನೋಡಿ ಇದನ್ನು ವಿನಾಯಿತಿ ಕೊಡುವ ಅಧಿಕಾರವನ್ನು ಸ್ಥಳೀಯ ಅಧಿಕಾರಿಗಳಿಗೆ ಕೊಟ್ಟರೆ ಅವರಿಂದ ಇದನ್ನು ಮಾಡಲು ಸಾಧ್ಯವೇ? ಹಾಗಿದ್ದರೆ ಅವನಿಗೆ ಬೆಟರ್‌ಮೆಂಟು ಲೆವೀ ಮಾಡತಕ್ಕ ರೈತರಿಗೆ ಒಂದು ಪರಿಹಾರವನ್ನು ಕೊಡಲು ಇಲ್ಲಿ ಒಂದು ಪ್ರಾವಿಷನ್ನು ಇರಲಿ ಎಂದು ಅದಕ್ಕೋಸ್ಕರ ಇಲ್ಲಿ ಇದನ್ನು ತಾವು ಒಪ್ಪಿಕೊಳ್ಳಬೇಕು ಎಂದು ತಿದ್ದುಪಡಿ ತಂದಿದ್ದೇನೆಯೇ ಹೊರತು ಬೇರೆ ಯಾವ ದುರುದ್ದೇಶದಿಂದಲೂ ಅಲ್ಲ. ಇದು ಬಹಳ ಒಳ್ಳೆಯ ಉದ್ದೇಶ. ಇದು ಬೇರೆ ಬೇರೆ ರಾಜ್ಯಗಳಲ್ಲಿ ಈ ರೀತಿಯಾದ ಒಂದು ಪ್ರಾವಿಷನ್ನು ಇದೆ. ಇದಕ್ಕೋಸ್ಕರ ತಾವು ಕೂಡ ಇಂತಹ ಒಂದು ಪ್ರಾವಿಷನ್ನು ಒಂದನ್ನು ಇಟ್ಟಿರುವುದು ಒಳ್ಳೆಯದು.

ಅನುಕೂಲ ಮಾಡಿಕೊಡಬೇಕೆಂದು ಕಂಡು ಬಂದಾಗ ಕೆಳಗಿನ ಅಧಿಕಾರಿಗಳಿಗೆ ಸೂಚನೆ ಕೊಡುವುದಕ್ಕೆ ಅವಕಾಶವಿರುತ್ತದೆ. ಬೆಳೆಯ ಬೆಲೆ ಕಡಿಮೆಯಾಗಿದೆ ಎಂದು ತಿಳಿದು ಬಂದಾಗ ರೈತರಿಗೆ ಅನುಕೂಲ ಮಾಡಲು ಸರ್ಕಾರಕ್ಕೆ ಅಧಿಕಾರವಿರುವಂತೆ ಪ್ರಾವಿಸೋ ಇಟ್ಟುಕೊಳ್ಳುವುದು ಒಳ್ಳೆಯದು. ಆದ ದರಿಂದ ಒಂದು ಸದುದ್ದೇಶದಿಂದ ಈ ತಿದ್ದುಪಡಿಯನ್ನು ತಂದಿಹೆಯೇ ಹೊರತು ಮತ್ತೇನೂ ಇಲ್ಲ ಎಂದು ಸ್ಪಷ್ಟಪಡಿಸುತ್ತೇನೆ.

† ಶ್ರೀ ಎಚ್. ಕೆ. ವೀರಣ್ಣಗೌಡ.—ಉದ್ದೇಶವೇನೋ ಘನವಾದದ್ದು. ಆದರೆ ಅನಗತ್ಯವಾದ ವಿಚಾರವಿದು. ನಾನು ಉತ್ತರ ಕೊಡುವಾಗ ಒಂದು ವಿಚಾರ ಹೇಳುವುದನ್ನು ಮರೆತೆ. ಅದನ್ನು ಈಗ ಹೇಳುತ್ತೇನೆ. ಕೆಲವು ಸ್ನೇಹಿತರು ಬೆಟರ್‌ಮೆಂಟ್ ಲೆವೀ ಅಥವಾ ವಾಟರ್ ರೇಟ್ ನಾವು ಹಾಕುವುದು ಯಾವ ರೀತಿ ಎಂದು ಹೇಳಿದರು ಆ ಬಗ್ಗೆ ವಿವರ ಹೇಳಬೇಕಾಗಿತ್ತು. ಈಗಿರುವ ಪದ್ಧತಿ ಪ್ರಕಾರ ಬೆಟರ್‌ಮೆಂಟ್ ಲೆವೀ ಅಥವಾ ವಾಟರ್ ರೇಟ್ ಮೊದಲನೆಯ ವರ್ಷ ಇಲ್ಲ, ಆಮೇಲೆ ಕಾಲು ಭಾಗ, ನಂತರ ಅರ್ಧಭಾಗ, ಅನಂತರ ಮುಕ್ಕಾಲು ಭಾಗ, ಕೊನೆಗೆ ಪೂರ್ಣವಾಗಿ ಹಾಕುವುದುಂಟು ಮೊದಲಿನಿಂದಲೂ ಈ ರೀತಿ ನಡೆದುಕೊಂಡು ಬಂದಿದೆ, ಬೆಟರ್‌ಮೆಂಟ್ ಲೆವೀ 10—12 ಕಂತುಗಳಲ್ಲಿ ಕೊಡಲು ಅವಕಾಶವಿದೆ.

ಇನ್ನು ತಿದ್ದುಪಡಿ ವಿಚಾರದಲ್ಲಿ ಹೇಳುತ್ತೇನೆ. ಅವರು ಹೇಳಿದ ಹಾಗೆ ಇದೇನೂ ಅಗತ್ಯವಿಲ್ಲ ಈಗ ಅದನ್ನೇ ಅನುಸರಿಸುತ್ತಿದ್ದೇವೆ. ಉದಾಹರಣೆಗೆ ಕನ್ನಂಬಾಡಿ ಕಟ್ಟೆ ಒಣಗಿ ಹೋದರೆ ಏನು ಮಾಡುವುದು ಎಂದು ಹೇಳಿದರು. ಅಂಥ ಸಂದರ್ಭ ಬಂದಾಗ ರೆಮಿಷನ್ ಕೊಟ್ಟಿರುವುದಲ್ಲದೆ ಸರ್ಕಾರದವರು ಪರಿಹಾರ ಸಹ ಕೊಟ್ಟಿದ್ದಾರೆ. ಸಕ್ಕರೆ ಕಂಪೆನಿ ಮತ್ತು ಸರ್ಕಾರ ಯೋಚಿಸಿ ಒಂದು ಸಮಿತಿ ಮಾಡಿ ಎಷ್ಟು ಲಕ್ಷ ರೂಪಾಯಿ ನಷ್ಟವಾಗಿದೆ ಎಂದು ಪರಿಶೀಲಿಸಿ ಸರ್ಕಾರ ಒಂದು ಭಾಗ, ಸಕ್ಕರೆ ಕಂಪನಿ ಒಂದು ಭಾಗ, ರೈತರು ಒಂದು ಭಾಗ ಅವನ್ನು ವಹಿಸುವಂತೆ ಗೊತ್ತುಮಾಡಿ ಸಹಾಯ ನಿಧಿ ಸಹ ಕೊಟ್ಟಿದ್ದಾರೆ. ಕಬ್ಬು ಒಣಗಿದ್ದಕ್ಕೆ ರೆಮಿಷನ್ ಕೊಟ್ಟಿದ್ದಾರೆ. ಹಾಗಿರುವಾಗ ಹೊಸದಾಗಿ ಒಂದು ತಿದ್ದುಪಡಿ ಮಾಡಬೇಕು, ಅಪೆಲೇಟ್ ಅಥಾರಿಟಿಗೆ ಅವಕಾಶವಿರಬೇಕು ಎಂದು ಹೇಳುತ್ತಿದ್ದಾರೆ, ಆದರೆ ಅದು ಜಾರಿಯಲ್ಲಿರುವುದರಿಂದ ತಿದ್ದುಪಡಿಯ ಅಗತ್ಯವಿಲ್ಲ. ಆದುದರಿಂದ ಒಪ್ಪುವುದಕ್ಕಾಗುವುದಿಲ್ಲ.

Sri C. J. MUCKANNAPPA.—On the assurance given by the Honourable Minister, I do not want to press the amendment.

The amendment was, by leave of the House, withdrawn.

MR. SPEAKER.—Now amendment No. 2.

Sri M. C. NARASIMHAN.—Sir, I move :

"That in item (ii) before the words " the estimated increase in the captial value of the land" , the following words shall be inserted :

"not more than fifty percent of".

MR. SPEAKER.—Amendment moved :

"That in item (ii) before the words "the estimated increase in the captial value of the land", the following words shall be inserted :

"not more than fifty per cent of".

† Sri M. C. NARASIMHAN.—I shall briefly indicate as to why this amendment is necessary. Already, the Minister while replying to the debate assured that it is not the intention of the Government to take the maximum amount of increase in the captial value of the land by way of betterment levy. In other words, he put it that he is not interested in taking the proverbial pound of flesh. If that is so, then there is no reason why it should not be found in the main section itself. This 50 per cent of the captial value of the land has already been provided for in the rules which have been recently issued. I have already read it out. So it is in accordance with both the existing rules and also the sentiment expressed by the Minister. I also stated that in no other State in India it is more than 50 per cent of the increase in the capital value of the land.

† ಶ್ರೀ ಎಚ್. ಕೆ. ವೀರಣ್ಣಗೌಡ.—ಸ್ವಾಮಿ, ಈ ತಿದ್ದುಪಡಿಗೆ ಸಹ ಅವಕಾಶವಿಲ್ಲವೆಂಬುದು ನನ್ನ ಅಭಿಪ್ರಾಯ. ಏಕೆಂದರೆ ನಾನಾಗಲೆ ಹೇಳಿದಂತೆ ಶೇಕಡ 50 ಭಾಗಕ್ಕಿಂತ ಹೆಚ್ಚಿಲ್ಲದೆ ಎಂದು ಹೇಳಿದರೆ ನಿರ್ಬಂಧ ಮಾಡಿದ ಹಾಗಾಗುತ್ತದೆ. ಅದು ಬೇಡ, ಸರ್ಕಾರಕ್ಕೆ ಅವಕಾಶವಿರಬೇಕು ಎರಡನೆಯದಾಗಿ ಇಂಥ ಸಂದರ್ಭಗಳನ್ನು ಯೋಚನೆ ಮಾಡಿ ಅನೇಕ ಸಲಹೆಗಳನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಅದಕ್ಕೆ ರೂಲ್ಸ್‌ನಲ್ಲಿ ಅವಕಾಶವಿದೆ ಮತ್ತು ತಿದ್ದುಪಡಿ ಮಾಡುವುಕ್ಕೆ ರೂಲ್ಸ್‌ನಲ್ಲಿ ಅವಕಾಶವಿದೆ ಈ ತಿದ್ದುಪಡಿಯು ಅಗತ್ಯವೇ ಇಲ್ಲ. ಆದುದರಿಂದ ಒಪ್ಪುವುದಕ್ಕಾಗುವುದಿಲ್ಲ ಎಂದು ಇಷ್ಟು ಮಾತ್ರ ಹೇಳುತ್ತೇನೆ.

Sri M. C. NARASIMHAN.—I press my amendment.

MR. SPEAKER.—I shall put the amendment to vote. The question is:

"That in item (ii) before the words 'the estimated increase in the capital value of the land', the following words shall be inserted:

"Not more than fifty per cent of"."

The amendment was negatived.

MR. SPEAKER.—There is another amendment standing in the name of Sri M. C. Narasimhan;

Sri M. C. NARASIMHAN.—Sir, I beg to move:

"That after item (ii) the following items shall be added:—

(iii) After the proviso to sub-section (1) of section 4 the following provisos shall be added:—

"Provided that lands benefited by the construction, expansion or alteration of any work shall be divided into suitable classes by the Government and the annual increase in the gross produce of each class of lands, shall be estimated,

Provided that all lands which are of the same quality and which judged by their commandability are so situated as to derive the same amount of benefit from the work shall be placed in the same class,

Provided further that the estimate shall be made with reference to the average of the prices prevailing in the case of work whose construction, expansion or alteration was completed before the commencement of this Act, during the three years immediately proceding such commencement and in the case of a work whose construction, expansion or alteration was completed after the commencement of this Act, during the three years immediately proceding such completion;

Provided also that the average aforesaid shall not exceed three times the price which prevailed in August, 1939."

Mr. SPEAKER.—Amendment moved:—

"That after item (ii) the following items shall be added:—

(iii) After the proviso to sub-section (1) of section 4 the following provisos shall be added:—

"Provided that lands benefited by the construction, expansion or alteration of any work shall be divided into suitable classes by the Government and the annual increase in the gross produce of each class of lands, shall be estimated.

Provided that all lands which are of the same quality and which judged by their commandability are so situated as to derive the same amount of benefit from the work shall be placed in the same class.

Provided further that the estimate shall, be made with reference to the average of the prices prevailing in the case of work whose construction, expansion or alteration was completed before the commencement of this Act, during the three years immediately preceding such commencement and in the case of a work whose construction, expansion or alteration was completed after the commencement of this Act, during the three years immediately preceding such completion;

Provided also that the average aforesaid shall not exceed three times the price which prevailed in August, 1939."

Sri M. C. NARASIMHAN.—I shall also take up the other amendment with regard to adding item (iii).

Mr. SPEAKER.—That is not in order. It is simply repetitive. I have not allowed it. So the best thing is, you can speak on the clause itself. You have given one amendment.

†Sri M. C. NARASIMHAN.—I have given one, but it was split into two.

The idea in incorporating it is that this enunciates the manner in which the capital value should be determined. The principle under which the capital value should be determined are stated in the main section itself. It is always necessary that such a vital matter on which the entire levy depends should find a place in the main section and it should not be the rule making power. Second, it would be different the principle enunciated in the rules which have been recently issued by the Government. I belive, Sir, that in the rules, the principles enunciated will enable the offiber to get a greater amount by way of betterment levy, so much so, the total burden would be slightly less in the working stages. Sir, I shall conclude by saying that I have taken this verbetim from the Madras Act--section 4--which was passed in 1957. In Madras there was an Act even in 1952 and it was sufficiently elaboratrd subsequently. So, I thought it better that it is incorporated in the main section and not leavy it for the rule making power, of the Government which, on principle, is wrong.

5–30 P.M.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ನಾನು ಈ ತಿದ್ದುಪಡಿಯನ್ನು ಸಮರ್ಥನೆ ಮಾಡುವುದಕ್ಕೆ ಕಾರಣವಿಷ್ಟೆ. ತಾವು ಈ ಅಮೆಂಡಿಂಗ್ ಬಿಲ್ಲಿನಲ್ಲೇ ಅಧಿಕಾರಿಗಳು ಯಾವ ತತ್ವಗಳನ್ನನುಸರಿಸಬೇಕು, ಯಾವ ಮಾರ್ಗವನ್ನು ಅನುಸರಿಸಬೇಕೆಂದು ಇಲ್ಲಿಯೇ ಸ್ಪಷ್ಟವಾಗಿ ಹೇಳಿಬಿಟ್ಟಿದ್ದರೆ ಚೆನ್ನಾಗಿತ್ತು. ತಾವೇನೇ ರೂಲ್ಸ್‌ನಲ್ಲಿ ಮಾಡಬಹುದೆಂದು ಹೇಳಬಹುದು. ಆದರೆ ಈಗ ನಮ್ಮಲ್ಲಿ ಬಂದಿರತಕ್ಕ ಅನೇಕ ರೂಲ್ಸ್ ಮತ್ತು ನೋಟಿಫಿಕೇಷನ್‌ಗಳನ್ನು ನೋಡಿದರೆ, ಮುಂದೆ ನೀವು ಮಾಡತಕ್ಕ ರೂಲ್ಸ್‌ಗಳ ಪರಿಣಾಮವೇನಾಗುತ್ತವೆಂದು ಅರ್ಥ ಮಾಡಿಕೊಳ್ಳಬಹುದು. ನಿಮ್ಮ ರೂಲ್ಸ್, ನೋಟಿಫಿಕೇಷನ್‌ಗಳು ಎಷ್ಟು ಸಾರಿ ಹೈಕೋರ್ಟಿನ ಮುಂದೆ ಪ್ರಶ್ನೆ ಮಾಡಲ್ಪಟ್ಟಿಲ್ಲ! ನಿಮಗೆ ಗೊತ್ತಿರುವ ಹಾಗೆ ನಿಮ್ಮ ಲಾ-ಡಿಪಾರ್ಟ್‌ಮೆಂಟ್ ಎಲ್ಲವನ್ನೂ ಸರಿಯಾಗಿ examine ಮಾಡಿಸಾದರು ಮಾಡುತ್ತಿದ್ದರೂ, ಅವು ಸರಿಯಿಲ್ಲ, ಆಕ್ಟಿಗೆ ವಿರೋಧವಾಗಿದೆಯೆಂದು ಹೇಳಿ ಅವನ್ನು ತೆಗೆದು ಹಾಕುತ್ತಿದ್ದಾರೆ! ಅಂಥವಲ್ಲ ಮತ್ತೆ ನಾವು ರೂಲ್ಸ್ ಮಾಡುವ ಅಧಿಕಾರ ಸರ್ಕಾರಕ್ಕಿದ್ದರೂ, ಆ ರೂಲ್ಸ್‌ಗಳು ಮತ್ತೆ ನಿಮ್ಮ ಮುಂದೆಯೇ ಬರುತ್ತವೆ, ಆಗ್ಗೆ ಸರಿಪಡಿಸಬಹುದು. ಎಂದು ಹೇಳುತ್ತಿರಲ್ಲಾ!! ಅದೇಕೆ? ಒಂದೇ ಸಾರಿ ಆಕ್ಟ್ ಮಾಡುವಾಗಲೇ perfect ಆಗಿ ಏಕೇ ಮಾಡಿಬಿಡಕೂಡದು. ಇಂದಿಗೂ ಯಾವತ್ತು ನೋಡಲಿ. ಹೈಕೋರ್ಟಿನಲ್ಲಿ ನಿಮ್ಮ ಲಾ-ಡಿಪಾರ್ಟ್‌ಮೆಂಟಿನವರ ಪವರ್ ನಡೆದೇ ನಡೆಯುತ್ತಿರುತ್ತದೆ. ನಿಮ್ಮನ್ನು (ವೀರಣ್ಣಗೌಡರನ್ನು) ನಾನು ನಿರ್ದಿಷ್ಟನಾಗಿ ಹೇಳುತ್ತಿಲ್ಲ. ನೀವು ಸಾಧು ಸಂತರ ಗುಂಪಿಗೆ ಸೇರಿದವರು ನಿಮ್ಮ ಕಾಲದಲ್ಲಿ ಇವೆಲ್ಲಾ ಆಗಿದ್ದಿಲ್ಲಾ ಅದೆಲ್ಲಾ ಎಚ್. ಎಂ. ಚನಬಸಪ್ಪನವರ ಕಾಲದ್ದು, ನಾನು ಹೇಳುತ್ತಿರುವುದು ಇಲ್ಲಿ ನೀವು Water Rate ಹಾಕುತ್ತೀವೆಂದು ಹೇಳುತ್ತೀರಿ. ಎಷ್ಟು ಎಂದು ಹೇಳಿಲ್ಲ. ನೋಟಿಫಿಕೇಷನ್ ಮುಂದೆ

ಬರುತ್ತದೆಂದು ಹೇಳಿಬಿಟ್ಟಿದ್ದೀರಿ. ಒಬ್ಬ ಅಧಿಕಾರಿಗೆ ಯಾವುದಾದರೂ ಎಲೆಕ್ಷನ್ ನಡೆಸುವ ವಿಷಯ ಕೊಟ್ಟರೆ ಆ ಅಧಿಕಾರಿಯು ಎಲೆಕ್ಷನ್ ಪತ್ರಗಳೆಲ್ಲವನ್ನೂ ಈ ಪ್ರಕಾರವೇ ವಿಮರ್ಶೆಮಾಡಿ ಎಲ್ಲವನ್ನೂ ಸರಿಯಾಗಿದೆಯೆಂದು ಅಲ್ಲಿಯೇ ಹೇಳಬೇಕು ಎಂದು ಸ್ಪಷ್ಟವಾಗಿ ವಿಧಿಸಿದ್ದೀರಿ. ಹಾಗೆಯೇ ಇಲ್ಲಿಯೂ ಯಾವ ರೀತಿ ಬೆಟರ್‌ಮೆಂಟ್ ಲೆವಿ ಹಾಕಬೇಕೆಂದು ಅಧಿಕಾರಿಗಳಿಗೆ ವಿಧಿಸಬೇಕಾದ್ದು ನ್ಯಾಯ. ಇದನ್ನಾದರೂ ಸರ್ಕಾರದವರು ಒಪ್ಪಿಕೊಳ್ಳಬೇಕೆಂದು ನಾನು ಮಾನ್ಯ ಸಚಿವರನ್ನು ಪ್ರಾರ್ಥನೆಮಾಡುತ್ತೇನೆ.

†ಶ್ರೀ ಎಚ್. ಕೆ. ವೀರಣ್ಣ ಗೌಡ.—ಅವರು ಪ್ರಾರ್ಥನೆ ಮಾಡಿದರೂ, ಇದನ್ನು ಒಪ್ಪಿಕೊಳ್ಳುವುದಕ್ಕೆ ಮನಸ್ಸಾಗುವುದಿಲ್ಲ. ಕಾರಣವೇನೆಂದರೆ, ಅವರು ಯಾವ ನಿಯಮ ಕೊಡಬೇಕಾಗಿದೆಯೆಂದು ಹೇಳುತ್ತಾರೋ, ಇದನ್ನು ಇಲ್ಲಿಯೇ ಸೇರಿಸುವುದರಿಂದ ಇನ್ನೂ ನಾಲ್ಕರಷ್ಟು ಕೊಡಬೇಕಾಗುತ್ತದೆ. ಆದ್ದರಿಂದ ಇಂಥ ತೊಡಕಿನದು ಆಕ್ಟಿನಲ್ಲಿ ಬೇಡ ಎಂತಲೇ ರೂಲ್ಸಿನಲ್ಲಿ ಮಾಡೋಣವೆಂದು ಹೇಳಿದ್ದೇವೆ ಕಾನೂನು ಯಾವಾಗಲೂ ಸರಳವಾಗಿ ಬಹು ಅರ್ಥಗರ್ಭಿತವಾಗಿರಬೇಕು. ಅದಲ್ಲದೆ ಹಿಂದಿನ ಮೂರು ವರ್ಷದೇನಿತ್ತು, ಅದರ ಸರಾಸರಿಯೇನು ಎಂಬುದನ್ನೆಲ್ಲಾ ಇಲ್ಲಿಯೇ ಸೇರಿಸುವುದು ಕಷ್ಟ. ಆದ್ದರಿಂದ ತಾವು ಹೇಳಿದ ಸಲಹೆಗಳನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ಅದನ್ನು ರೂಲ್ಸಿನಲ್ಲಿ ಮಾಡುತ್ತೇವೆ. ಈ ಆಶ್ವಾಸನದ ಮೇಲೆ ಅವರು ತಮ್ಮ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

Sri M. C. NARASIMHAN.—I am not pressing the amendment, Sir.

The amendment was by leave of the House withdrawn.

Mr. SPEAKER.—The question is:

"That clause 3 stand part of the Bill"

The motion was adopted.

Clause 3 was added to the Bill.

Mr. SPEAKER.—Clause 4 to 7. The question is:

That clauses 4 to 7 both inclusive stand part of the Bill"

The motion was adopted.

Clauses 4 to 7 both inclusive were added to the Bill.

Mr. SPEAKER.—Clause 1 and the Title and the Preamble. The question is:

"That clause 1 and the Title and the Preamble stand part of the Bill"

The motion was adopted.

Clause 1, the Title and the Preamble were added to the Bill.

Motion to pass.

Sri H. K. VEERANNA GOWDH.—Sir, I beg to move:

"That the Mysore Irrigation (Levy of Betterment Contribution and Water Rate) Amendment Bill, 1960, be passed"

Mr. SPEAKER.—The question is:

"That the Mysore Irrigation (Levy of Betterment Contribution and Water Rate) Amendment Bill, 1960, be passed"

The motion was adopted.

THE MYSORE HERIDITARY VILLAGE OFFICES ABOLITION BILL, 1959, AS REPPORTED BY JOINT SELECT COMMITTEE.

Motion to consider

Sri KADIDAL MANJAPPA (Minister for Revenue).—Sir, I move:

"That the Mysore Heriditary Village Offices Abolition Bill, 1959 as reported by Joint Select Committee be taken into consideration."

Mr. SPEAKER.—Motion Moved:

"That the Mysore Hereditary Village Offices Abolition Bill, 1959 as reported by Joint Select Committee be taken into consideration." The time allotted for the consideration of this Bill is three hours.

Sri M. C. NARASIMHAN.—Sir, I have got a point of order about this. It is a general convention that the Select Committee Report cannot change the entire character of the Bill; it can only make amendments in the direction or by way of clarification in the direction of principles already enunciated in the Bill. Here, it makes a fundamental departure from the Bill. Sir, several other Select Committee Reports also coming before us. I am having them also in view.

The second objection so for as this Bill is concerned is as follows. You will kindly see that section 5 of the report, provides land being granted. It creates a right in favour of a village officer who has already been assigned but in the case of a person who has not been assigned any land, there is no right created. The subject matter is abolition of village offices. It has nothing to do with the conditions covering the village offices. Then, you cannot make an invidious discrimination between those people who are assigned land and those who are not assigned land. Since it offends one of the important articles of the Constitution which guaruntees equality of treatment before the eye of law. This has been discriminatary in character and you should examine whether this Select Committee can be taken in the form in which it is presented before us.

Mr. SPEAKER.—First of all, the Hon'ble Member has raised a point about the powers of the Joint Select Committee. The Select Committee or the Joint Select Committee recommends; it does not pass any law. It only recommends to this House; it is a recommendatory body and it is for this House either to accept or to reject it.